ವಿಜಯಪುರ | ಸಂಪುಟ 04 | ಸಂಚಿಕೆ 215 | ಪುಟ 04 | ₹ 3.00
https://udayarashminews.com
udayarashmi 90088 88340

# ಉದಯ ರಶ್ಮಿ

Udayarashmi Kannada Daily
ಜನಪರ-ಜೀವಪರ
ಕನ್ನಡ ದಿನಪತ್ರಿಕೆ

ಸಂಪಾದಕ : ಇಂದುಶೇಖರ ಮಣೂರ
Editor: Indushekhar Manur

editor.udayarashmi@gmail.com RNI NO: KARKAN/2023/86203 ರವಿವಾರ, ಅಕ್ಟೋಬರ್ 18, 2026

"ನಾನೇ ವಿಡಿಯೋ ಮಾಡಿದ್ದೇನೆಂದು ಸ್ಟಿಂಗ್ ಕಿಂಗ್ ಪಿನ್ ಹೇಳಿದ್ದಾರೆ. ಇದನ್ನೆಲ್ಲ ನೋಡಿ ಸಿದ್ದರಾಮಯ್ಯ ಅವರ ರಕ್ತ ಕುದಿಯುತ್ತಿಲ್ವಾ? ಅವರು ಯಾಕೆ ಸುಮ್ಮನಿದ್ದಾರೆ? ಈ ಪ್ರಕರಣದಲ್ಲಿ ರಾಜ್ಯ ಸರ್ಕಾರ ಸಂಪೂರ್ಣವಾಗಿ ನಿಷ್ಕ್ರಿಯವಾಗಿದೆ ಮತ್ತು ಸಿದ್ದರಾಮಯ್ಯ ಅವರ ವರ್ಚಸ್ಸಿಗೆ ಧಕ್ಕೆ ತರಲು ಹುನ್ನಾರ ನಡೆಸಲಾಗುತ್ತಿದೆ."



■ ಎಚ್.ಡಿ.ಕುಮಾರಸ್ವಾಮಿ
ಕೇಂದ್ರ ಸಚಿವರು

## 3ತಿಂಗಳಿಂದ ಬಬಲೇಶ್ವರ ನಾಕಾ ರಸ್ತೆ ಬಂದ್ : ಆಕ್ರೋಶ



■ ಉದಯರಶ್ಮಿ ದಿನಪತ್ರಿಕೆ

**ವಿಜಯಪುರ ಮಹಾನಗರ ಪಾಲಿಕೆಯ ನಿರ್ಲಕ್ಷ್ಯಕ್ಕೆ ಆಮ್ ಆದ್ಮಿ ಪಾರ್ಟಿ ಆಕ್ರೋಶ - ಒಂದು ವಾರ ಗಡುವು**

ವಿಜಯಪುರ: ನಗರದ ಬಬಲೇಶ್ವರ ನಾಕಾದಿಂದ ನಾಯರಾ ಪೆಟ್ರೋಲ್ ಪಂಪ್‌ವರೆಗಿನ ರಸ್ತೆಯ ಒಂದು ಬದಿಯನ್ನು ಅಭಿವೃದ್ಧಿ ಕಾಮಗಾ-ರಿಯ ನೆಪದಲ್ಲಿ ಗುಂಡಿ ತೋಡಿ ಸಂಪೂರ್ಣ ಬಂದ್ ಮಾಡಿ ಸುಮಾರು ಮೂರು ತಿಂಗಳು ಕಳೆದಿದ್ದರೂ, ಸಮಸ್ಯೆಗೆ ಪರಿಹಾರ ಕಲ್ಪಿಸದ ವಿಜಯಪುರ ಮಹಾನಗರ ಪಾಲಿಕೆಯ ನಿರ್ಲಕ್ಷ್ಯವನ್ನು ಆಮ್ ಆದ್ಮಿ ಪಾರ್ಟಿ ವಿಜಯಪುರ ತೀವ್ರವಾಗಿ ಖಂಡಿಸಿದೆ.

ಆಮ್ ಆದ್ಮಿ ಪಾರ್ಟಿ ವಿಜಯಪುರದ ಜಿಲ್ಲಾಧ್ಯಕ್ಷ ಭೋಗೇಶ್ ಸೋಲಾಪುರ್ ಅವರ ನೇತೃತ್ವದಲ್ಲಿ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿ, ರಸ್ತೆಯ ಒಂದು ಬದಿ ದೀರ್ಘಕಾಲದಿಂದ ಬಂದ ಆಗಿರುವುದರಿಂದ ವಾಹನ ಸವಾರರು, ಸ್ಥಳೀಯ ನಿವಾಸಿಗಳು ಹಾಗೂ ವ್ಯಾಪಾರಸ್ಥರಿಗೆ ತೊಂದರೆಯಾಗುತ್ತಿದೆ. ಅಭಿವೃದ್ಧಿ ಕಾಮಗಾರಿ ಆರಂಭಿಸಿದನಂತರಅದನ್ನುನಿಗದಿತಸಮಯದಲ್ಲಿ ಪೂರ್ಣಗೊಳಿಸಿ, ಸಾರ್ವಜನಿಕ ಸಂಚಾರಕ್ಕೆ ಅನುಕೂಲ ಕಲ್ಪಿಸುವುದು ಸಂಬಂಧಪಟ್ಟ ಅಧಿಕಾರಿಗಳ ಜವಾಬ್ದಾರಿಯಾಗಿದೆ. ಈ ಕುರಿತು ಜನಪ್ರತಿನಿಧಿಗಳಿಗೆ ಜವಾಬ್ದಾರಿ ಬೇಡವಾ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಸಾರ್ವಜನಿಕರ ಸಮಸ್ಯೆಗಳಿಗೆ ಮಹಾನಗರ ಪಾಲಿಕೆ ಸ್ಪಂದಿಸುತ್ತಿಲ್ಲ, ಸಾರ್ವಜನಿಕರ ಹಿತದೃಷ್ಟಿಯಿಂದ ಆಮ್ ಆದ್ಮಿ ಪಾರ್ಟಿ ಸಾರ್ವಜನಿಕರನ್ನು ಒಳಗೊಂಡು ರಸ್ತೆ ರೋಕೋ ಆಂದೋಲನ ಮಾಡಬೇಕಾಗುತ್ತೆ ಎಂದು ಪಕ್ಷದ ಜಿಲ್ಲಾಧ್ಯಕ್ಷ ಭೋಗೇಶ್ ಸೋಲಾಪುರ್ ಎಚ್ಚರಿಕೆ ನೀಡಿದ್ದಾರೆ.

ಈ ಸಂದರ್ಭದಲ್ಲಿ ಆಮ್ ಆದ್ಮಿ ಪಾರ್ಟಿ ಯುವ ಮುಖಂಡರಾದ ನರೇಂದ್ರ ನಂದಿಕೋಲ, ಬಸಯ್ಯ ಸ್ಥಾವರಮಠ ಉಪಸ್ಥಿತರಿದ್ದರು.

## ವಿಕಲಚೇತನರಿಗೋಸ್ಕರ ಪಾದಯಾತ್ರೆ ಬೆಂಬಲಾರ್ಥ ಸಭೆ ಇಂದು

■ ಉದಯರಶ್ಮಿ ದಿನಪತ್ರಿಕೆ



ವಿಜಯಪುರ: ಕರ್ನಾಟಕ ರಾಜ್ಯ ಅಂಗವಿಕಲರ ಹಾಗೂ ಪಾಲಕರ ಒಕ್ಕೂಟ ವಿಜಯಪುರ ಜಿಲ್ಲಾ ಸಮಿತಿ, ಜಿಲ್ಲಾ ಮತ್ತು , ರಾಜ್ಯಮಟ್ಟದ ಹಾಗೂ ರಾಮನಗರದಿಂದ ವಿಧಾನಸೌಧದ ವರೆಗೆ ರಾಜ್ಯದ ವಿಕಲಚೇತನರಗೋಸ್ಕರ ಪಾದಯಾತ್ರೆ ಕೈಗೊಂಡಿರುವ ಅವರ ಬೆಂಬಲಾರ್ಥವಾಗಿ ಪ್ರತಿಭಟನೆ ಧರಣಿ ಸತ್ಯಾಗ್ರಹ ಹಮ್ಮಿಕೊಳ್ಳುವ ಕುರಿತು ತಮ್ಮ ಸಲಹೆ ಸೂಚನೆಗಳ ಬಗ್ಗೆ ಅ.18 ರವಿವಾರ ಬೆಳಗ್ಗೆ 10 ಗಂಟೆಗೆ ನಗರ ಗಗನ ಮಹಲ ವಿಜಯಪುರದಲ್ಲಿ ಸಭೆಯನ್ನು ಕರೆಯಲಾಗಿದೆ.

ಆದ್ದರಿಂದ ಜಿಲ್ಲೆಯಲ್ಲಿರುವ ಅಂಗವಿಕಲರಗೋಸ್ಕರ ಶ್ರಮಿಸುತ್ತಿರುವ ವಿಕಲಚೇತನರು/ಸಂಘ/ಸಂಸ್ಥೆಗಳು/ ಎಮ್.ಆರ್.ಡಬ್ಲ್ಯೂ, ವಿ.ಆರ್.ಡಬ್ಲ್ಯೂ ಹಾಗೂ ಯು.ಆರ್.ಡಬ್ಲ್ಯೂ, ಹೆಚ್ಚಿನ ಸಂಖ್ಯೆಯಲ್ಲಿ ಭಾವಗಹಿಸುವಂತೆ ಜಿಲ್ಲಾಧ್ಯಕ್ಷ ವಿನೋದ ಎಂ.ಖೇಡ ಕೋರಿದ್ದಾರೆ.

# ಕಾಂಗ್ರೆಸ್ ನಾಯಕಿ ಸೌಮ್ಯಾ ರೆಡ್ಡಿ ದಿಢೀರ್ ರಾಜಿನಾಮೆ!

### ಕೆಪಿಸಿಸಿ ಮಹಿಳಾ ಘಟಕದ ಅಧ್ಯಕ್ಷರಾಗಿದ್ದ ಸೌಮ್ಯಾ ರೆಡ್ಡಿ | ಸಚಿವ ಸಂಪುಟದಲ್ಲಿ ಮಹಿಳೆಗೆ ಪ್ರಾತಿನಿಧ್ಯ ಸಿಗದ ಕಾರಣ ರಾಜಿನಾಮೆ

ಬೆಂಗಳೂರು: ಕಳೆದ ಎರಡು ವರ್ಷಗಳಿಂದ ಕೆಪಿಸಿಸಿ ಮಹಿಳಾ ಘಟಕದ ಅಧ್ಯಕ್ಷರಾಗಿದ್ದ ಸೌಮ್ಯಾ ರೆಡ್ಡಿ ಶನಿವಾರ ದಿಢೀರ್ ತಮ್ಮ ಸ್ಥಾನಕ್ಕೆ ರಾಜಿನಾಮೆ ನೀಡಿದ್ದಾರೆ.



2026ರ ಆಗಸ್ಟ್ 20ರಂದೇ ತಮ್ಮ ರಾಜಿನಾಮೆ ಪತ್ರವನ್ನು ಸೌಮ್ಯಾ ರೆಡ್ಡಿ ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರಿಗೆ ರವಾನಿಸಿದ್ದಾರೆ. ಡಿಕೆ ಶಿವಕುಮಾರ್ ಸಚಿವ ಸಂಪುಟದಲ್ಲಿ ಮಹಿಳೆಗೆ ಪ್ರಾತಿನಿಧ್ಯ ಸಿಕ್ಕಿಲ್ಲ. ಹೀಗಾಗಿ ಹೈಕಮಾಂಡ್ ಗಮನ ಸೆಳೆಯಲು ಮುಂದಾಗಿದ್ದು ತಮ್ಮ ರಾಜಿನಾಮೆ ಪತ್ರದಲ್ಲಿ ಈ ವಿಷಯವನ್ನು ಪ್ರಸ್ತಾಪಿಸಿದ್ದಾರೆ.

ಕೆಪಿಸಿಸಿ ಮಹಿಳಾ ಘಟಕದ ಅಧ್ಯಕ್ಷ ಸ್ಥಾನಕ್ಕೆ ಬೇರೆಯವರನ್ನು ನೇಮಕ ಮಾಡುವವರೆಗೂ ಆ ಸ್ಥಾನದಲ್ಲಿ ಮುಂದುವರೆಯುವುದಾಗಿ ತಿಳಿಸಿದ್ದಾರೆ.

ಇನ್ನು ಮುಂದಿನ ರಾಜ್ಯ ವಿಧಾನಸಭೆ ಚುನಾವಣೆ ಮತ್ತು ಲೋಕಸಭೆ ಚುನಾವಣೆಯಲ್ಲಿ ಸಾಮಾನ್ಯ ಕಾರ್ಯಕರ್ತೆಯಾಗಿ ನನ್ನ ಜವಾಬ್ದಾರಿಗಳನ್ನು ಮುಂದುವರೆಸಿಕೊಂಡು ಹೋಗಲು ಇಚ್ಛಿಸುತ್ತೇನೆ ಎಂದು ತಿಳಿಸಿದ್ದಾರೆ.

### ಮಾಜಿ ಸಿಎಂ ಸಿದ್ದರಾಮಯ್ಯ ಭೇಟಿಯಾದ ಸಿಎಂ ಡಿ.ಕೆ.ಶಿವಕುಮಾರ್

ಮೈಸೂರು: ರಾಜ್ಯ ರಾಜಕೀಯದಲ್ಲಿ ಸ್ಟಿಂಗ್ ಕಾರ್ಯಾಚರಣೆ ವಿವಾದ ಬೆನ್ನಲ್ಲೇ ನಿನ್ನೆ ಶುಕ್ರವಾರ ತಡರಾತ್ರಿ ಮುಖ್ಯಮಂತ್ರಿ ಡಿ ಕೆ ಶಿವಕುಮಾರ್ ದಿಢೀರನೆ ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಅವರ ಮೈಸೂರು ನಿವಾಸದಲ್ಲಿ ಭೇಟಿ ಮಾಡಿ ಚರ್ಚೆ ನಡೆಸಿದ್ದಾರೆ.



ಕೆಆರ್ ಎಸ್ ಅಣೆಕಟ್ಟಿನ ಬೃಂದಾವನ ಉದ್ಯಾನದಲ್ಲಿ ಕಾವೇರಿ ಮಾತೆಗೆ ಪತ್ನಿ ಜೊತೆಗೂಡಿ ನಿನ್ನೆ ಸಾಯಂಕಾಲ ಆರತಿ ನೆರವೇರಿಸಿದ ಮುಖ್ಯಮಂತ್ರಿ ಡಿ ಕೆ ಶಿವಕುಮಾರ್ ಬೆಂಗಳೂರಿಗೆ ಆಗಮಿಸುವ ಮಧ್ಯೆ ಮೈಸೂರಿನಲ್ಲಿ ಸಿದ್ದರಾಮಯ್ಯನವರನ್ನು ಭೇಟಿ ಮಾಡಿ ಗೌಪ್ಯವಾಗಿ ಚರ್ಚೆ ನಡೆಸಿದ್ದಾರೆ.

ನಿನ್ನೆ ಮುಖ್ಯಮಂತ್ರಿಗಳು ಸಿದ್ದರಾಮಯ್ಯನವರನ್ನು ಭೇಟಿ ಮಾಡುವ ಕಾರ್ಯಕ್ರಮ ನಿಗದಿಯಾಗಿರಲಿಲ್ಲ. ದಿಢೀರನೆ ಭೇಟಿ ಮಾಡಿದ್ದು ಕುತೂಹಲ ಮೂಡಿಸಿದೆ. ಇದಕ್ಕೂ ಮುನ್ನ ಗೃಹ ಸಚಿವ ಪ್ರಿಯಾಂಕ್ ಖರ್ಗೆಯವರು ಕೂಡ ಸಿದ್ದರಾಮಯ್ಯನವರನ್ನು ಭೇಟಿ ಮಾಡಿದ್ದರು.

## ಆರೋಗ್ಯ ಕ್ಷೇತ್ರಕ್ಕೆ ಎಕ್ಸಲೆಂಟ್ ನರ್ಸಿಂಗ್ ಕಾಲೇಜ್ ಕೊಡುಗೆ ಅನನ್ಯ

### ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿ ಡಾ. ಮಲ್ಲನಗೌಡ ಬಿರಾದಾರ ಶ್ಲಾಘನೆ

■ ಉದಯರಶ್ಮಿ ದಿನಪತ್ರಿಕೆ

ವಿಜಯಪುರ: ಆರೋಗ್ಯ ಕ್ಷೇತ್ರದ ಬೆಳವಣಿಗೆಯಲ್ಲಿ ನರ್ಸಿಂಗ್ ಕಾಲೇಜಿನ ವಿದ್ಯಾರ್ಥಿಗಳ ಪಾತ್ರ ಮಹತ್ವದ್ದಾಗಿದ್ದು, ಪ್ರತಿವರ್ಷ ನರ್ಸಿಂಗ್ ವಿದ್ಯಾರ್ಥಿಗಳಿಗೆ ಗುಣಮಟ್ಟದ ಶಿಕ್ಷಣ ಒದಗಿಸುತ್ತಿರುವ ಎಕ್ಸಲೆಂಟ್ ನರ್ಸಿಂಗ್ ಕಾಲೇಜಿನ ಕೊಡುಗೆ ಅನನ್ಯವಾದದ್ದು ಎಂದು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿ ಡಾ. ಮಲ್ಲನಗೌಡ ಬಿರಾದಾರ ಶ್ಲಾಘಿಸಿದರು.




ನಗರದಲ್ಲಿ ನಡೆದ ಮಾತೋಶ್ರೀ ಗೌರಮ್ಮ ಅಪ್ಪಾಸಾಹೇಬ್ ಬಬಲೇಶ್ವರ ಗ್ರಾಮೀಣಾಭಿವೃದ್ಧಿ ಸಂಸ್ಥೆಯ "ಎಕ್ಸಲೆಂಟ್ ಕಾಲೇಜ್ ಆಫ್ ನರ್ಸಿಂಗ್ " ಮಹಾವಿದ್ಯಾಲಯದ ನಾಲ್ಕನೇ ಬ್ಯಾಚಿನ ವಿದ್ಯಾರ್ಥಿಗಳ ದೀಪದಾನ ಹಾಗೂ ಪ್ರತಿಜ್ಞಾವಿಧಿ ಬೋಧನಾ ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಯುವ ನಾಯಕ ಸಂಗಮೇಶ್ ಬಬಲೇಶ್ವರ ಅವರು ತಮ್ಮ ತಾಯಿಯ ಸ್ಮರಣೆಗಾಗಿ ಸ್ಥಾಪಿಸಿರುವ ಕಾಲೇಜಿನಿಂದ ತಾಯಿ ಹೃದಯದ ನರ್ಸಗಳು ಪ್ರತಿ ವರ್ಷ ಹೊರ ಬರುವಂತಾಗಲಿ ಎಂದು ಡಿಎಚ್ಒ ಡಾ.ಮಲ್ಲನಗೌಡ ಹಾರೈಸಿದರು.

ಸಮಾರಂಭದ ಅಧ್ಯಕ್ಷತೆ ವಹಿಸಿದ್ದ ಸಂಸ್ಥೆಯ ಸಂಸ್ಥಾಪಕರು ಹಾಗೂ ಅಮ್ಮನ ಮಡಿಲು ಚಾರಿಟೇಬಲ್ ಟ್ರಸ್ಟ್ ನ ಅಧ್ಯಕ್ಷ ಸಂಗಮೇಶ ಬಬಲೇಶ್ವರ ಮಾತನಾಡಿದರು.

ಮುಖ್ಯ ಅತಿಥಿಗಳಾಗಿ ಆಗಮಿಸಿದ ಜನನಿ ಆಸ್ಪತ್ರೆಯ ಮುಖ್ಯಸ್ಥ ಡಾ ಹಂಪನಗೌಡ ಪಾಟೀಲ್ ಮಾತನಾಡಿ, ನರ್ಸಿಂಗ್ ವೃತ್ತಿ ಅತ್ಯಂತ ಪವಿತ್ರವಾದ ವೃತ್ತಿಯಾಗಿದ್ದು, ಎಲ್ಲ ವಿದ್ಯಾರ್ಥಿಗಳು ಸೇವಾ ಮನೋಭಾವದಿಂದ ಸೇವೆ ಸಲ್ಲಿಸಿದರೆ ಅದಕ್ಕಿಂತ ಶ್ರೇಷ್ಠವಾದ ಕೆಲಸ ಮತ್ತೊಂದಿಲ್ಲ ಎಂದರು.

ಇನ್ನೋರ್ವ ಅತಿಥಿ ಸರ್ಕಾರಿ ನರ್ಸಿಂಗ್ ಕಾಲೇಜಿನ ಪ್ರಾಚಾರ್ಯ ಡಾ. ಹನುಮಂತಪ್ಪ ಹತ್ತರಿಕಿಹಾಳ ಮಾತನಾಡಿ, ವಿದ್ಯಾರ್ಥಿಗಳು ವೃತ್ತಿಯಲ್ಲಿ ಶಿಸ್ತು ಮತ್ತು ಪ್ರಾಮಾಣಿಕತೆಯನ್ನು ಮೈಗೂಡಿಸಿಕೊಳ್ಳಬೇಕು. ಎಕ್ಸಲೆಂಟ್ ನರ್ಸಿಂಗ್ ಕಾಲೇಜುಜಿಲ್ಲಾಆಸ್ಪತ್ರೆಯೊಂದಿಗೆ ಸಂಯೋಜನೆ ಹೊಂದಿರುವುದರಿಂದ ಇಲ್ಲಿ ಓದುತ್ತಿರುವ ನರ್ಸಿಂಗ್ ವಿದ್ಯಾರ್ಥಿಗಳು ಅತ್ಯಂತ ಸುದೈವಿಗಳು ಎಂದು ಹೇಳಿದರು.

ಇದೇ ವೇಳೆ ಉದ್ಯಮಿ ಶಾಂತೇಶ ಕಳಸಗೊಂಡ ಮತ್ತು ಸಾಧಕ ವಿದ್ಯಾರ್ಥಿಗಳನ್ನು ಸನ್ಮಾನಿಸಲಾಯಿತು. ಸಂಸ್ಥೆಯ ನಿರ್ದೇಶಕರಾದ ಪ್ರದೀಪ್ ಲಿಂಗದಳ್ಳಿ ಪ್ರಾಚಾರ್ಯ ಶ್ರೀಮತಿ ಶ್ವೇತಾ ಬಿರಾದಾರ, ಶ್ರೀಮತಿ ಎಸ್ ಎ ಮೋಮಿನ್, ಶ್ರೀಮತಿ ಜಯಶ್ರೀ, ಅಮಿತ್ ಹಾಗೂ ಸಂಯೋಜಕರಾದ ರಾಜಶೇಖ ತಿಡಗುಂದಿ, ಶರಣಗೌಡ ಹಾಗೂ ಅಧ್ಯಾಪಕರು, ವಿದ್ಯಾರ್ಥಿಗಳು ಪಾಲಕರು, ಪಾಲ್ಗೊಂಡಿದ್ದರು.



"ದೇವರು ಎಲ್ಲ ಕಡೆ ತಾಯಿಯ ಜೊತೆಗೆ ಇನ್ನೊಬ್ಬ ತಾಯಿಯ ಸ್ಥಾನದಲ್ಲಿ ವೈದ್ಯರು ಮತ್ತು ನರ್ಸುಗಳನ್ನು ಸೃಷ್ಟಿಮಾಡಿದ್ದಾನೆ. ಹಾಗಾಗಿ ನೀವೆಲ್ಲರೂ ರೋಗಿಗಳಲ್ಲಿ ನಿಮ್ಮ ತಂದೆ ತಾಯಿಯನ್ನು ಕಂಡು ಪ್ರಾಮಾಣಿಕ ಸೇವೆ ಮಾಡಿದರೆ ನಮ್ಮ ತಾಯಿಯ ಸ್ಮರಣೆಗಾಗಿ ನಾವು ನರ್ಸಿಂಗ್ ಮಹಾವಿದ್ಯಾಲಯ ಪ್ರಾರಂಭ ಮಾಡಿದ್ದು ಸಾರ್ಥಕವಾಗುತ್ತದೆ."

■ ಸಂಗಮೇಶ ಬಬಲೇಶ್ವರ
ಸಂಸ್ಥಾಪಕರು
ಎಕ್ಸಲೆಂಟ್ ಕಾಲೇಜ್ ಆಫ್ ನರ್ಸಿಂಗ್ ಮಹಾವಿದ್ಯಾಲಯ ಹಾಗೂ ಅಮ್ಮನ ಮಡಿಲು ಚಾರಿಟೇಬಲ್ ಟ್ರಸ್ಟ್ ನ ಅಧ್ಯಕ್ಷರು

# ಮಾಧ್ಯಮದವರ ಕುಂದುಕೊರತೆ ತ್ವರಿತ ನಿವಾರಣೆಗೆ ಕ್ರಮ

### ಬೆಂಗಳೂರಿನಲ್ಲಿ ಜಿಲ್ಲಾ ಮಟ್ಟದ ದಿನಪತ್ರಿಕೆಗಳ ಮಾಲೀಕರು, ಸಂಪಾದಕರು, ಮುದ್ರಕರು ಹಾಗೂ ಜಿಲ್ಲಾ ವಾರ್ತಾಧಿಕಾರಿಗಳಿಗಾಗಿ ಆಯೋಜಿಸಲಾಗಿದ್ದ ಕಾರ್ಯಾಗಾರದಲ್ಲಿ ಭಾರತದ ಪತ್ರಿಕಾ ನೋಂದಣಿಯ ಪ್ರಧಾನ ಮಹಾನಿರ್ದೇಶಕ ಯೋಗೇಶ್ ಕುಮಾರ್ ಬವೇಜಾ ಭರವಸೆ

■ ಉದಯರಶ್ಮಿ ದಿನಪತ್ರಿಕೆ

ಬೆಂಗಳೂರು: ಪತ್ರಿಕೆಗಳು ಮತ್ತು ನಿಯತಕಾಲಿಕೆಗಳ ನೋಂದಣಿ ಪ್ರಕ್ರಿಯೆಯಲ್ಲಿ ಕೇಂದ್ರ ಸರ್ಕಾರವು ಹಲವಾರು ಮಹತ್ವದ ಬದಲಾವಣೆಗಳನ್ನು ತರುವ ಮೂಲಕ ಸುಮಾರು 150 ವರ್ಷದಷ್ಟು ಹಳೆಯ ಕಾಯ್ದೆಯನ್ನು ಮಾಧ್ಯಮದವರ ಅನುಕೂಲಕ್ಕಾಗಿ ಡಿಜಿಟಲೀಕರಣದೊಂದಿಗೆ ಸರಳೀಕರಣಗೊಳಿಸುವ ಮೂಲಕ ಮಾಧ್ಯಮ ಕ್ಷೇತ್ರವನ್ನು ಪ್ರೋತ್ಸಾಹಿಸಲಾಗುತ್ತಿದೆ ಎಂದು ಭಾರತದ ಪತ್ರಿಕಾ ನೋಂದಣೆಯ ಪ್ರಧಾನ ಮಹಾನಿರ್ದೇಶಕರಾದ ಯೋಗೇಶ್ ಕುಮಾರ್ ಬವೇಜಾ ಅವರು ತಿಳಿಸಿದರು.



ಭಾರತ ಸರ್ಕಾರದ ವಾರ್ತಾ ಮತ್ತು ಪ್ರಸಾರ ಸಚಿವಾಲಯದ ವಾರ್ತಾ ಶಾಖೆ ಬೆಂಗಳೂರು ಹಾಗೂ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ಇವರ ಸಹಯೋಗದಲ್ಲಿ ವಾರ್ತಾಸೌಧದ ಮಹಾತ್ಮ ಗಾಂಧೀ ಮಾಧ್ಯಮ ಕೇಂದ್ರದ ಸಭಾಂಗಣದಲ್ಲಿ ಇಂದು " ಪತ್ರಿಕಾ ಮತ್ತು ನಿಯತಕಾಲಿಕೆಗಳ ನೋದಂಣೆ ಕಾಯ್ದೆ 2023" ಮತ್ತು "ಪ್ರೆಸ್ ಸೇವಾ ಪೋರ್ಟಲ್" ಗೆ ಸಂಬಂಧಿಸಿದ ಕುಂದುಕೊರತೆ, ಸಮಸ್ಯೆಗಳನ್ನು ಪರಿಹ-ರಿಸುವ ನಿಟ್ಟಿನಲ್ಲಿ ಜಿಲ್ಲಾ ಮಟ್ಟದ ದಿನಪತ್ರಿಕೆಗಳ ಮಾಲೀಕರು, ಸಂಪಾದಕರು, ಮುದ್ರಕರು ಹಾಗೂ ಜಿಲ್ಲಾ ವಾರ್ತಾಧಿಕಾರಿಗಳಿಗಾಗಿ ಆಯೋಜಿಸಲಾಗಿದ್ದ ಕಾರ್ಯಾಗಾರದಲ್ಲಿ ಅವರು ಮಾತನಾಡಿದರು.

ಈ ಹಿಂದೆ ಹೊಸ ಪತ್ರಿಕೆ ಆರಂಭಿಸಬೇಕಾದರೆ ಜಿಲ್ಲಾಧಿಕಾರಿಗಳ ಕಚೇರಿ ಮೂಲಕ ಅರ್ಜಿ ಸಲ್ಲಿಸಿ ದೆಹಲಿಗೆ ಕಳುಹಿಸಬೇಕಾಗಿತ್ತು. ಇದರಿಂದ ತಿಂಗಳುಗಳು ಹಾಗೂ ವರ್ಷಗಳೇ ಕಳೆಯುತ್ತಿದ್ದವು. ಆದರೆ ಈಗ 2023 ರ ಹೊಸ ಖಾಯ್ದೆ ಮೂಲಕ ಎಲ್ಲಾ ಪ್ರಕ್ರಿಯೆಗಳನ್ನು 'ಪ್ರೆಸ್ ಸೇವಾ ಪೋರ್ಟಲ್' ಮೂಲಕ ಆನ್ಲೈನ್‌ನಲ್ಲಿ ನಡೆಯಲಿರುವುದರಿಂದ ಭೌತಿಕ ದಾಖಲೆಗಳ ಸಲ್ಲಿಕೆಗೆ ಅವಕಾಶವಿರುವುದಿಲ್ಲ. ಹಾಗಾಗಿ ನೋಂದಣಿ ಪ್ರಕ್ರಿಯೆಯು ಸುಲಭವಾಗಿ ಮತ್ತು ಕಡಿಮೆ ಸಮಯದಲ್ಲಿ ನೆರವೇರಲಿದೆ. ಯಾವುದೇ ದಾಖಲೆಗಳು ಕಳೆದುಹೋಗುವ ಅಥವಾ ಕಾಗದಪತ್ರಗಳ ಅಲೆದಾಟದ ಸಮಸ್ಯೆ ಇರುವುದಿಲ್ಲ. ಆದ್ದರಿಂದ ಪತ್ರಿಕೆಗಳು, ನಿಯತಕಾಲಿಕೆಗಳ ನೋಂದಣಿ ಕಾಯ್ದೆಯ ಮಾರ್ಗಸೂಚಿಯನ್ನು ಎಲ್ಲರೂ ಚಾಚೂ ತಪ್ಪದೆ ಪಾಲಿಸಬೇಕು ಎಂದು ತಿಳಿಸಿದರು.

ನೋಂದಣಿ ಪ್ರಕ್ರಿಯೆಯ ಕಾಲಮಿತಿಯನ್ನು ಗಣನೀಯವಾಗಿ ಕಡಿತಗೊಳಿಸಲಾಗಿದ್ದು, ಅರ್ಜಿ ಸಲ್ಲಿಸಿದ ಕೇವಲ 3 ತಿಂಗಳೊಳಗೆ ಹೊಸ ಪತ್ರಿಕೆಯನ್ನು ಪ್ರಾರಂಭಿಸಬಹುದು ಎಂದು ತಿಳಿಸಿದರು. ಪಿಆರ್ ಜಿಐನಿಂದ ಸಮಗ್ರ ಪರಿಶೀಲನೆ ಬಳಿಕ ಅಂತಿಮವಾಗಿ ಟೈಟಲ್ ನೀಡಿದ ಮೇಲೆ 12 ತಿಂಗಳೊಳಗೆ ಪತ್ರಿಕೆಯನ್ನು ಆರಂಭಿಸುವುದು ಕಡ್ಡಾಯವಾಗಿರುತ್ತದೆ ಎಂದು ತಿಳಿಸಿದರು.

ಪತ್ರಿಕೆಗಳ ಹೊಸ ರಿಜಿಸ್ಟೇಶನ್ ಮಾಡುವ ಬಗ್ಗೆ, ಮಾಲೀಕತ್ವ ಬದಲಾವಣೆ, ವಿಳಾಸ ಬದಲಾವಣೆ ಮಾಡಿಸುವುದಕ್ಕೆ ಸಹ ನಿಯಮಾನುಸಾರ ಅವಕಾಶವಿರುತ್ತದೆ. ಹೊಸ ನೋಂದಣಿ ಹೇಗೆ ಮಾಡುವುದು, ಹೊಸ ಆವೃತ್ತಿ (ಓಜತಿ ಇಜುಣುಂಟಿ) ಸೇರ್ಪಡೆ ಹೇಗೆ, ನೋಂದಣಿ ಪರಿಷ್ಕರಣೆ, ಮಾಲೀಕತ್ವ ವರ್ಗಾವಣೆ , ದಂಡ ಪಾವತಿ, ಮುದ್ರಣ ಕಾಗದ ಆಮದು ಮತ್ತು ಪತ್ರಿಕೆಗಳ ಸ್ಥಗಿತಗೊಳಿಸುವಿಕೆ/ರದ್ಧತಿ, ಇವೇ ಮುಂತಾದ ಪ್ರಕ್ರಿಯೆಗಳನ್ನು ಡಿಜಿಟಲ್ ಮೂಲಕ ಹೇಗೆ ಮಾಡುವುದು ಎಂಬುದನ್ನು ವಿವರಿಸಿದರು.

ಸಂವಾದದಲ್ಲಿ ಸಂಪಾದಕರುಗಳು ಹಾಗೂ ಜಿಲ್ಲಾ ವಾರ್ತಾಧಿಕಾರಿಗಳ ಪ್ರಶ್ನೆಗಳಿಗೆ ಉತ್ತರಿಸಿದ ಅವರು ಇಲ್ಲಿನ ಪ್ರತಿ ಸಲಹೆಗಳನ್ನು ಸ್ವೀಕರಿಸಲಾಗಿದೆ ಹಾಗೂ ಈ ಕುರಿತಂತೆ ಕೇಂದ್ರದ ವಾರ್ತಾ ಇಲಾಖೆಯ ಗಮನಕ್ಕೆ ತರಲಾಗುವುದು. ಕೇಂದ್ರ ವಾರ್ತಾ ಇಲಾಖೆಯ ಕರ್ನಾಟಕದ ಶಾಖೆಗಳಲ್ಲಿ ಪೇಪರ್ ಗಳ ಹಾಜರಾತಿ ಕುರಿತಂತೆ ಮುದ್ರಿತ ಪೇಪರ್ ಗಳನ್ನು ಪಡೆಯುವ ವ್ಯವಸ್ಥೆ ಜಾ-ರಿಗೆ ತರುವ ಬಗ್ಗೆ ಚಿಂತನೆ ನಡೆಸಲಾಗುವುದು ಎಂದು ಹೇಳಿದರು.

ಇದಕ್ಕೂ ಮುಂಚಿತವಾಗಿ ಮಾತನಾಡಿದ ವಾರ್ತಾ ಇಲಾಖೆಯ ಕಾರ್ಯದರ್ಶಿಗಳಾದ ಜೆ. ಮಂಜುನಾಥ್ ಅವರು ಮಾಧ್ಯಮವು ಪ್ರಜಾಪ್ರಭುತ್ವದ ನಾಲ್ಕನೇ ಸ್ತಂಭವಾಗಿದೆ. ಸಮಾಜದಲ್ಲಿ ನೂರಾರು ಉಳುಕುಗಳು ಇರುತ್ತದೆ. ಆದರೆ ಮಾಧ್ಯಮದವರು ಸಮಾಜಕ್ಕೆ ಒಳ್ಳೆಯದಾಗುವಂತಹ ಸುದ್ದಿಗಳನ್ನು ನೀಡಬೇಕು. ಪತ್ರಿಕೆಗಳು ನಕರಾತ್ಮಕ ವಿಷಯಗಳಿಗೆ ಪ್ರಾಧಾನ್ಯತೆ ಕೊಡಬಾರದು. ಬದಲಿಗೆ ಆಶಾದಾಯಕ, ಅಭಿವೃದ್ಧಿ ಪತ್ರಿಕೋದ್ಯಮಕ್ಕೆ ಹೆಚ್ಚು ಒತ್ತು ನೀಡಬೇಕು ಎಂದು ಸಲಹೆ ನೀಡಿದರು.

ವಾರ್ತಾ ಇಲಾಖೆಯ ಮಾಧ್ಯಮ ಪಟ್ಟಿಗೆ ಪತ್ರಿಕೆಗಳು ಸೇರ್ಪಡೆ ಆಗುತ್ತಿರುವ ಸಂಖ್ಯೆ ದಿನೇ ದಿನೆ ಹೆಚ್ಚುತ್ತಿದೆ. ಪತ್ರಿಕೆಗಳ ಸಂಖ್ಯೆ ಹೆಚ್ಚಳದಿಂದ ಸರಕಾರಕ್ಕೆ ಆರ್ಥಿಕ ಹೊರೆಯಾಗುತ್ತಿದೆ. ಈ ಹಿನ್ನೆಲೆಯಲ್ಲಿ ಪತ್ರಿಕೆಗಳ ನೋಂದಣಿ, ಹಾಜರಾತಿ, ಪ್ರಸಾರ ಸಂಖ್ಯೆ ಮೇಲೆ ಇನ್ನಷ್ಟು ನಿಗಾ ವಹಿಸುವ ಅಗತ್ಯವಿರುತ್ತದೆ. ಕೃತಕ ಬುದ್ಧಿಮತ್ತೆ(ಎ.ಐ), ಚಾಟ್ ಜಿಪಿಟಿ ಮತ್ತಿತರ ತಂತ್ರಜ್ಞಾನದ ಈ ಯುಗದಲ್ಲಿ ದಿನಪತ್ರಿಕೆಗಳ ಹಾಜರಾತಿಗಾಗಿ 48 ಗಂಟೆಗಳ ಕಾಲಾವಕಾಶ ಅಗತ್ಯವಿಲ್ಲ ಎನಿಸುತ್ತದೆ. ಇದಲ್ಲದೇ ಪ್ರಸಾರ ಸಂಖ್ಯೆಯ ಬಗ್ಗೆಯೂ ನಿಗಾ ವಹಿಸುವ ಅಗತ್ಯವಿದೆ ಎಂದು ಅಭಿಪ್ರಾಯಪಟ್ಟರು.

ಕಾರ್ಯಕ್ರಮದ ಆರಂಭದಲ್ಲಿ ಕಾರ್ಯಾಗಾರದ ಉದ್ದೇಶ ಕು-ರಿತು ಪ್ರಾಸ್ತಾವಿಕವಾಗಿ ಬೆಂಗಳೂರಿನ ದೂರದರ್ಶನ ಕೇಂದ್ರದ ಮುಖ್ಯಸ್ಥರಾದ ಬಿ.ಕೆ. ಕೇಶವಮೂರ್ತಿ ಅವರು ಮಾತನಾಡಿದರು, ಕಾರ್ಯಾಗಾರದಲ್ಲಿ ಎನ್.ಐ.ಸಿ ಉಪನಿರ್ದೇಶಕರಾದ ಗೌರವ್ ಶರ್ಮ್, ವಾರ್ತಾ ಇಲಾಖೆಯ ಹಿರಿಯ ಅಧಿಕಾರಿಗಳಾದ ಜಂಟಿ ನಿರ್ದೇಶಕರು, ಉಪ ನಿರ್ದೇಶಕರು ಹಾಗೂ ರಾಜ್ಯದ ಎಲ್ಲಾ ಜಿಲ್ಲೆಗಳ ವಾರ್ತಾಧಿಕಾರಿಗಳು ಮತ್ತು ಸ್ಥಳೀಯ ಹಾಗೂ ಪ್ರಾದೇಶಿಕ ಪತ್ರಿಕೆಗಳ ಮಾಲೀಕರು, ಸಂಪಾದಕರುಗಳು ಉಪಸ್ಥಿತ-ರಿದ್ದರು.

### ಪತ್ರಕರ್ತರು" ಯಾರು? ಎಂಬ ಸ್ಪಷ್ಟ ವ್ಯಾಖ್ಯಾನ ಅಗತ್ಯ :ಎಂ.ಎನ್.ಅನುಚೇತ್



ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ ಆಯುಕ್ತರಾದ ಎಂ.ಎನ್.ಅನುಚೇತ್ ಅವರು ಮಾತನಾಡಿ, ದಿನಪತ್ರಿಕೆಗಳ ಬೆಂಬಲಕ್ಕಾಗಿ ಸರ್ಕಾರವು ಪ್ರೋತ್ಸಾಹ ಜಾಹೀರಾತನ್ನು ನೀಡುತ್ತಿದೆ. ಆದರೆ ಇತ್ತೀಚಿನ ದಿನಗಳಲ್ಲಿ ಪ್ರೋತ್ಸಾಹ ಜಾಹೀರಾತು ಪಡೆಯುವುದಕ್ಕಾಗಿಯೇ ದಿನಪತ್ರಿಕೆಗಳ ಹುಟ್ಟಿಕೊಳ್ಳುತ್ತಿವೆ. ಪ್ರೋತ್ಸಾಹ ಜಾಹೀರಾತಿಗಾಗಿ 2022 ರಲ್ಲಿ 44 ಕೋಟಿ ರೂಪಾಯಿ ವೆಚ್ಚವಾಗಿತ್ತು. ಆದರೆ 2025-2026 ರ ವೇಳೆಗೆ ಅದರ ವೆಚ್ಚ ದ್ವಿಗುಣವಾಗಿ 82 ಕೋಟಿ ರೂಪಾಯಿಗಳಾಗಿರುತ್ತದೆ. ಆದ್ದರಿಂದ ನಿಜವಾಗಿಯೂ ಪತ್ರಿಕೋದ್ಯಮವನ್ನೇ ವೃತ್ತಿಯಾಗಿಸಿಕೊಂಡಿರುವವರಿಗೆ ಪ್ರೋತ್ಸಾಹ ಜಾಹೀರಾತು ತಲುಪಬೇಕಿದೆ. ಹಾಗಾಗಿ ಇದಕ್ಕೆ ಕಡಿವಾಣ ಹಾಕುವ ಅಗತ್ಯವಿರುವುದರಿಂದ ರಾಜ್ಯದ ಎಲ್ಲಾ ಮಾಧ್ಯಮದವರು ಸಹಕರಿಸಬೇಕೆಂದರು.

ಸಾಮಾಜಿಕ ಜಾಲತಾಣ, ಡಿಜಿಟಲ್ ಯುಗದಲ್ಲಿ ನಿಜವಾದ ಪತ್ರಕರ್ತ ಯಾರು ಎಂಬುದು ದೊಡ್ಡ ಪ್ರಶ್ನೆಯಾಗಿದೆ. ಯಾರು ಪತ್ರಕರ್ತ ಎಂಬುದರ ಬಗ್ಗೆ ರಾಷ್ಟ್ರಮಟ್ಟದಲ್ಲಿ ಗಂಭೀರ ಚರ್ಚೆಯಾಗಬೇಕಿದೆ. ಪಿಆರ್ ಜಿಐ ಪತ್ರಿಕೆಗಳ ನೋಂದಣಿ, ನಿರ್ವಹಣೆ ಕು-ರಿತು ಗಮನಹರಿಸುತ್ತಿದೆ. ಆದರೆ ಇಂದಿನ ಡಿಜಿಟಲ್ ಯುಗದಲ್ಲಿ "ಪತ್ರಕರ್ತ" ಯಾರು ಎಂಬುದು ಸ್ಪಷ್ಟವಾಗಿ ವ್ಯಾಖ್ಯಾನಿಸುವ ಅಗತ್ಯವಿದೆ ಎಂದು ಆಯುಕ್ತ ಅನುಚೇತ್ ಅವರು ಪ್ರತಿಪಾದಿಸಿದರು.

# ಅಧರಗಳ ಅಮೃತ ಮಿಲನ: ಒಲವಿನ ದಿವ್ಯ ಕಾವ್ಯ

■ ಉದಯರಶ್ಮಿ ದಿನಪತ್ರಿಕೆ








ಜಯಶ್ರೀ.ಜೆ. ಅಬ್ಬಿಗೇರಿ.
ಇಂಗ್ಲೀಷ್ ಉಪನ್ಯಾಸಕರು
ಬೆಳಗಾವಿ ಮೊ:9449234142

ಜೀವದ ಗೆಳತಿ,

ಪ್ರಣಯದ ಆರಾಧನೆಗೆ ಮಾತುಗಳ ಹಂಗಿಲ್ಲ, ಭಾಷೆಯ ಮಿತಿಯಿಲ್ಲ. ಪ್ರೀತಿ ಎಂಬುದು ಎರಡು ಆತ್ಮಗಳ ನಡುವೆ ನಡೆಯುವ ಮೌನ ಸಂಭಾಷಣೆ. ಕಾಲೇಜಿನ ಆ ಹಸಿರು ಆವರಣದಲ್ಲಿ, ಕ್ಯಾಂಪಸ್ಸಿನ ತಂಪಾದ ಗಾಳಿಯ ನಡುವೆ ಮೊಳಕೆಯೊಡೆದ ಒಲವು ಇಂದು ಒಂದು ಸುಂದರ ಮಹಾಕಾವ್ಯವಾಗಿ ಮಾರ್ಪಟ್ಟಿದೆ. ನಿನ್ನ ಕಣ್ಣುಗಳ ಹೊಳಪಿನಲ್ಲಿ ನನ್ನ ಇಡೀ ಜಗತ್ತನ್ನೇ ಕಂಡುಕೊಂಡ ಕ್ಷಣದಿಂದ, ಬದುಕಿನ ಪ್ರತಿ ಪುಟವೂ ಕೇವಲ ನಿನ್ನದೇ ನೆನಪುಗಳಿಂದ ತುಂಬಿಹೋಗಿದೆ.

**ಪ್ರಥಮ ಭೇಟಿಯ ಮಧುರ ರೋಮಾಂಚನ**

ನೆನಪಿದೆಯೇ ನಿನಗೆ ಆ ಮುಸ್ಸಂಜೆಯ ಹೊತ್ತು? ರಂಗು ರಂಗಿನ ಮೈಸೂರು ರೇಷ್ಮೆ ಸೀರೆಯನ್ನುಟ್ಟು, ಕೈಯಲ್ಲಿ ಕಾಲೇಜಿನ ಪುಸ್ತಕಗಳನ್ನು ಹಿಡಿದು ನೀನು ನಡೆದು ಬರುತ್ತಿದ್ದಾಗ, ಇಡೀ ಪ್ರಕೃತಿಯೇ ನಿನ್ನ ಸೌಂದರ್ಯಕ್ಕೆ ತಲೆಬಾಗಿ ನಿಂತಂತೆ ಭಾಸವಾಗಿತ್ತು. ನಿನ್ನ ಕಿವಿಯೋಲೆಗಳ ನುಸುಳು ನೋಟ, ಹಣೆಗಿಟ್ಟ ಸಣ್ಣ ಬಿಂದಿ ನನ್ನ ಹೃದಯದ ಬಡಿತವನ್ನು ಒಂದು ಕ್ಷಣ ನಿಲ್ಲಿಸಿಬಿಟ್ಟಿತ್ತು. ಕ್ಯಾಂಟೀನ್‌ನಲ್ಲಿ ಕುಳಿತು ಬಿಸಿ ಬಿಸಿ ಕಾಫಿ ಸವಿಯುತ್ತಾ, ಮಾತುಗಳಿಲ್ಲದೆ ಕಣ್ಣಲ್ಲೇ ಕಣ್ಣಿಟ್ಟು ಮೌನವನ್ನು ಹಂಚಿಕೊಂಡ ಆ ದಿನ, ನಮ್ಮಿಬ್ಬರ ಅಂತರಂಗದ ಒಲವಿನ ಹೊಸ ಲೋಕಕ್ಕೆ ನಾಂದಿ ಹಾಡಿತು.



**ಕಣ್ಣಂಚಿನ ಸನ್ನೆ ಮತ್ತು ಹೃದಯದ ವೀಣೆ**

ಒಂದೇ ತರಗತಿಯಲ್ಲಿದ್ದರೂ ಪ್ರೀತಿಯನ್ನು ಮುಕ್ತವಾಗಿ ಒಪ್ಪಿಕೊಳ್ಳಲಾಗದ ಆ ದಿನಗಳ ಸಂಕೋಚವೇ ಒಂದು ಚಂದ. ಕ್ಲಾಸಿನ ಕಿಟಕಿಯಿಂದ ತೂರಿ ಬರುವ ತಂಗಾಳಿಯಂತೆ ನಿನ್ನ ದೃಷ್ಟಿ ನನ್ನ ಮೇಲೆ ಬಿದ್ದಾಗಲೆಲ್ಲಾ ನನ್ನ ಹೃದಯವೆಂಬ ವೀಣೆ ತಾನಾಗಿಯೇ ಮಧುರ ರಾಗವನ್ನು ನುಡಿಸುತ್ತಿತ್ತು. ಹಸಿದ ಹೊಟ್ಟೆಗೆ ಅಮ್ಮ ಪ್ರೀತಿಯಿಂದ ಕೊಟ್ಟು ಕಳುಹಿಸಿದ ಟಿಫನ್ ಬಾಕ್ಸ್ ತೆರೆದಾಗ, ನಿನಗೆ ಅದನ್ನು ಉಣಿಸುವ ನೆಪದಲ್ಲಿ ನನ್ನ ಪ್ರೀತಿಯನ್ನೇ ಸಂಪೂರ್ಣವಾಗಿ ಧಾರೆ ಎರೆದಿದ್ದೆ. ಬಾಯಾರಿದ ಪ್ರೀತಿಗೆ ಅಧರಗಳ ಆ ಅಮೃತ ಮಿಲನವು ಜೀವ ತುಂಬಿದ ಆ ಕ್ಷಣ ಮರೆಯಲಾಗದ ಇತಿಹಾಸ.

**ದಾಂಪತ್ಯದ ಹಸಿರು ಮತ್ತು ಅನಂತ ಪ್ರೀತಿ**

ಕಾಲೇಜಿನ ದಿನಗಳು ಕಳೆದು ನಾಲ್ಕು ವಸಂತಗಳುರುಳಿದರೂ, ನಮ್ಮ ಒಲವಿನ ಹಸಿರು ಮಾತ್ರ ಕಾಸಿ ಕಮರಿಹೋಗಿಲ್ಲ. ಇಂದು ದಾಂಪತ್ಯದ ಪವಿತ್ರ ಬಂಧನದಲ್ಲಿ ನಾವಿಬ್ಬರೂ ಒಂದಾಗಿದ್ದೇವೆ. ನಿನ್ನ ಹೆಜ್ಜೆಯ ಧೂಳು ನನ್ನ ಬದುಕಿನ ಹಾದಿಗೆ ಹೂವಿನ ಹಾಸಿಗೆಯಾಗಿದೆ. ನಿನ್ನ ಸೌಂದರ್ಯದ ಮಹಾಸಾಗರದಲ್ಲಿ ಮುಳುಗಲು ನನ್ನ ಮನಸ್ಸು ಸದಾ ಹಂಬಲಿಸುತ್ತದೆ. ಮುಂಜಾನೆಯ ಶುಭ ಮುಹೂರ್ತದಲ್ಲಿ ನಾಚಿಕೆಯಿಂದ ನೀನು ಮುಖ ತಿರುಗಿಸಿದಾಗ, ನಿನ್ನ ಹೃದಯದ ಮಿಡಿತ ನನ್ನ ಎದೆಯೊಳಗೆ ಸದ್ದಿಲ್ಲದೆ ಅಚ್ಚೊತ್ತುತ್ತದೆ. ಇದು ಕೇವಲ ಪ್ರೀತಿಯಲ್ಲ, ಜನ್ಮ ಜನ್ಮಾಂತರದ ಅನುಬಂಧ.

**ಕಾವ್ಯದ ನಮನ**

**"ನಿನ್ನ ಕಣ್ಣಿನಲ್ಲೇ ನನ್ನ ಪ್ರಪಂಚವಿದೆ,**
**ನಿನ್ನ ಒಲವಿನಲ್ಲೇ ನನ್ನ ಜೀವವಿದೆ.**
**ಅಧರಗಳ ಮೌನ ಮಿಲನದಲಿ ಗೆಳತಿ,**
**ನಮ್ಮ ಪ್ರೀತಿ ಅಮರ ಕಾವ್ಯವಾಗಿದೆ."**

ಈ ಸಾಲುಗಳು ಪ್ರಣಯದ ಅತ್ಯುನ್ನತ ಸ್ಥಿತಿಯನ್ನು ವರ್ಣಿಸುತ್ತವೆ. ಪ್ರೀತಿಯಲ್ಲಿ ಕಣ್ಣುಗಳೇ ಸರ್ವಸ್ವ, ಅಲ್ಲಿಯೇ ಇಡೀ ಜಗತ್ತು ಅಡಗಿದೆ. ಅಧರಗಳು ಮೌನವಾಗಿ ಒಂದಾದಾಗ ಹುಟ್ಟುವ ಆ ಪ್ರೇಮದ ಭಾಷೆ, ಯಾವುದೇ ಕಾವ್ಯಕ್ಕಿಂತಲೂ ಮಿಗಿಲಾದದ್ದು. ನಮ್ಮಿಬ್ಬರ ಬದುಕು ಸದಾ ಇಂತಹ ಪ್ರೀತಿಯ ಬೆಳಕಿನಲ್ಲಿ ಬೆಳಗಲಿ ಎಂಬುದೇ ನನ್ನ ಸದಾಶಯ.ಇಂತಿ ನಿನ್ನ ಜೀವದ ಗೆಳೆಯ



# 371(ಜೆ): ವಿಜಯಪುರದ ಹೋರಾಟ ನ್ಯಾಯದ ವಿಸ್ತರಣೆಯೋ, ಅವಕಾಶಗಳ ಮರುಹಂಚಿಕೆಯೋ?

■ ಉದಯರಶ್ಮಿ ದಿನಪತ್ರಿಕೆ




ಆಕಾಶ ರೋಡಗಿ.
ಶಿವೂರ – ಅಫಜಲಪುರ
ಕಲಬುರ್ಗಿ ಜಿಲ್ಲೆ

ಪ್ರಾದೇಶಿಕ ಅಸಮಾನತೆಯ ಸರಿಪಡಿಕೆ ಮತ್ತು ಈಗಾಗಲೇ ಸೌಲಭ್ಯ ಪಡೆಯುತ್ತಿರುವ ಜಿಲ್ಲೆಗಳ ಹಿತಾಸಕ್ತಿಗಳ ನಡುವೆ ಸಮತೋಲನ ಸಾಧಿಸುವುದೇ ಸರ್ಕಾರದ ಮುಂದಿರುವ ನಿಜವಾದ ಸವಾಲು.

ಕರ್ನಾಟಕದ ಪ್ರಾದೇಶಿಕ ರಾಜಕಾರಣದಲ್ಲಿ ಮತ್ತೆ ಸಂವಿಧಾನದ ಒಂದು ವಿಧಿ ಚರ್ಚೆಯ ಕೇಂದ್ರಕ್ಕೆ ಬಂದಿದೆ. ಅದುವೇ 371(ಜೆ). ಕಲ್ಯಾಣ ಕರ್ನಾಟಕದ ಶಿಕ್ಷಣ, ಉದ್ಯೋಗ ಮತ್ತು ಅಭಿವೃದ್ಧಿಗೆ ವಿಶೇಷ ಅವಕಾಶ ಕಲ್ಪಿಸಿದ ಈ ವ್ಯವಸ್ಥೆಯ ವ್ಯಾಪ್ತಿಗೆ ವಿಜಯಪುರ ಜಿಲ್ಲೆಯನ್ನು ಸೇರಿಸಬೇಕೆಂಬ ಬೇಡಿಕೆ ಈಗ ಹೋರಾಟದ ರೂಪ ಪಡೆದಿದೆ. ಸಿಂದಗಿಯಲ್ಲಿ ಧರಣಿ, ಮನವಿ, ಪ್ರತಿಭಟನೆಗಳ ಮೂಲಕ ಕೇಳಿಬರುತ್ತಿರುವ ಈ ಕೂಗು ಕೇವಲ ಮೀಸಲಾತಿಗಾಗಿ ಅಲ್ಲ; ಪ್ರಾದೇಶಿಕ ಅಸಮಾನತೆಯ ಪ್ರಶ್ನೆಯನ್ನು ಮತ್ತೊಮ್ಮೆ ಮುನ್ನೆಲೆಗೆ ತಂದಿದೆ.

ಆದರೆ ಕೆಲವು ಪ್ರಶ್ನೆಗಳು ಸಹಜವಾಗಿ ಏಳುತ್ತವೆ. ವಿಜಯಪುರವನ್ನು ಸೇರಿಸಿದರೆ ಅಲ್ಲಿನ ವಿದ್ಯಾರ್ಥಿಗಳಿಗೆ, ಉದ್ಯೋಗಾಕಾಂಕ್ಷಿಗಳಿಗೆ ಏನು ಸಿಗುತ್ತದೆ? ಈಗಾಗಲೇ ಸೌಲಭ್ಯ ಪಡೆಯುತ್ತಿರುವ ಜಿಲ್ಲೆಗಳ ಮೇಲೆ ಏನು ಪರಿಣಾಮವಾಗುತ್ತದೆ? ಅವಕಾಶಗಳು ವಿಸ್ತಾರಗೊಳ್ಳುತ್ತವೆಯೇ, ಅಥವಾ ಇರುವುದನ್ನೇ ಹೆಚ್ಚಿನ ಜನರ ನಡುವೆ ಹಂಚಬೇಕಾಗುತ್ತದೆಯೇ? ಈ ಪ್ರಶ್ನೆಗಳಿಗೆ ಭಾವನಾತ್ಮಕ ಘೋಷಣೆಗಳಿಂದಲ್ಲ, ಸಂವಿಧಾನದ ನಿಯಮ, ವಾಸ್ತವಾಂಶ ಮತ್ತು ನ್ಯಾಯಯುತ ನೀತಿಯ ಆಧಾರದಲ್ಲಿ ಉತ್ತರ ಹುಡುಕಬೇಕು.

**371(ಜೆ): ಒಂದು ವಿಧಿಯ ಹಿಂದಿನ ಹೋರಾಟ**



ಹೈದರಾಬಾದ್ ಕರ್ನಾಟಕ ಎಂದು ಕರೆಯಲಾಗುತ್ತಿದ್ದ (2019ರಲ್ಲಿ "ಕಲ್ಯಾಣ ಕರ್ನಾಟಕ" ಎಂದು ಮರುನಾಮಕರಣಗೊಂಡ) ಪ್ರದೇಶವು ದೀರ್ಘಕಾಲ ಆಡಳಿತಾತ್ಮಕ ನಿರ್ಲಕ್ಷ್ಯ, ಶೈಕ್ಷಣಿಕ ಹಿಂದುಳಿಕೆ ಮತ್ತು ಮೂಲಸೌಕರ್ಯದ ಕೊರತೆ ಎದುರಿಸಿತ್ತು. ರಾಜ್ಯದ ಇತರ ಭಾಗಗಳೊಂದಿಗೆ ಸಮಾನವಾಗಿ ಬೆಳೆಯಲು ವಿಶೇಷ ಅವಕಾಶ ಬೇಕೆಂಬ ಬೇಡಿಕೆ ದಶಕಗಳ ಕಾಲ ನಡೆಯಿತು.

ಈ ಹೋರಾಟದ ಫಲವಾಗಿ 98ನೇ ಸಂವಿಧಾನ ತಿದ್ದುಪಡಿ ಕಾಯ್ದೆ, 2012ರ ಮೂಲಕ 371(ಜೆ) ವಿಧಿ ಸೇರ್ಪಡೆಯಾಯಿತು. ಅದರ ಅಡಿಯ ವ್ಯವಸ್ಥೆಗಳು 2013ರ ಅಕ್ಟೋಬರ್ 1ರಿಂದ ಜಾರಿಗೆ ಬಂದವು.

ಇದರ ಉದ್ದೇಶ ಕೇವಲ ಮೀಸಲಾತಿಯಲ್ಲ. ಪ್ರದೇಶದ ಅಭಿವೃದ್ಧಿಗೆ ಪ್ರತ್ಯೇಕ ಮಂಡಳಿ ಸ್ಥಾಪನೆ, ಅಭಿವೃದ್ಧಿ ವೆಚ್ಚದ ನ್ಯಾಯಸಮ್ಮತ ಹಂಚಿಕೆ, ಹಾಗೂ ಶಿಕ್ಷಣ, ವೃತ್ತಿಪರ ತರಬೇತಿ ಮತ್ತು ಸರ್ಕಾರಿ ಉದ್ಯೋಗಗಳಲ್ಲಿ ಸ್ಥಳೀಯರಿಗೆ ಸಮಾನ



ಅವಕಾಶ ಒದಗಿಸುವುದು ಇದರ ಆಶಯ. ಹೀಗಾಗಿ ಇದನ್ನು ಮೀಸಲಾತಿಯ ಸಂಖ್ಯೆಗೆ ಸೀಮಿತಗೊಳಿಸುವುದು ಅದರ ಉದ್ದೇಶವನ್ನು ಕುಗ್ಗಿಸಿದಂತೆ.

**ಕಲ್ಯಾಣ ಕರ್ನಾಟಕಕ್ಕೆ ಸಿಕ್ಕಿರುವುದು: ಸೌಲಭ್ಯ ಮಾತ್ರವಲ್ಲ, ಹಕ್ಕು**

ಕಲಬುರಗಿ, ಬೀದರ್, ರಾಯಚೂರು, ಯಾದಗಿರಿ, ಕೊಪ್ಪಳ, ಬಳ್ಳಾರಿ ಮತ್ತು (2021ರಲ್ಲಿ ಬಳ್ಳಾರಿಯಿಂದ ಬೇರ್ಪಟ್ಟ) ವಿಜಯನಗರ ಜಿಲ್ಲೆಗಳು ಈ ವ್ಯಾಪ್ತಿಯಲ್ಲಿವೆ. ಈ ಪ್ರದೇಶದ ಶಿಕ್ಷಣ ಸಂಸ್ಥೆಗಳಲ್ಲಿ ಸ್ಥಳೀಯರಿಗೆ ಶೇ. 70ರಷ್ಟು ಸೀಟುಗಳು, ಪ್ರದೇಶದ ಸ್ಥಳೀಯ ವೃಂದದ ಹುದ್ದೆಗಳಲ್ಲಿ ಶೇ. 75ರಷ್ಟು ಮೀಸಲಾತಿ ಇದೆ. ಅಲ್ಲದೆ ರಾಜ್ಯಮಟ್ಟದ ಶಿಕ್ಷಣ ಸಂಸ್ಥೆಗಳು ಮತ್ತು ಹುದ್ದೆಗಳಲ್ಲಿ ಶೇ. 8ರ ಮೀಸಲಾತಿಗೆ ಅವಕಾಶವಿದೆ. ಕಲ್ಯಾಣ ಕರ್ನಾಟಕ ಪ್ರದೇಶಾಭಿವೃದ್ಧಿ ಮಂಡಳಿಯ ಮೂಲಕ ಪ್ರದೇಶದ ಅಭಿವೃದ್ಧಿಗೆ ವಿಶೇಷ ಗಮನ ನೀಡಲು ಸಾಂವಿಧಾನಿಕ ಆಧಾರವೂ ದೊರೆತಿದೆ.

ಆದರೆ ಸೌಲಭ್ಯ ಸಿಕ್ಕಿತೆಂದ ಮಾತ್ರಕ್ಕೆ ಎಲ್ಲ ಸಮಸ್ಯೆ ಪರಿಹಾರವಾಗಿಲ್ಲ. ಶಿಕ್ಷಣದ ಗುಣಮಟ್ಟ, ಉದ್ಯೋಗದ ಕೊರತೆ, ಆರೋಗ್ಯ ಸೇವೆಯ ಅಂತರ, ನೀರಾವರಿ ಮತ್ತು ಗ್ರಾಮೀಣ ಮೂಲಸೌಕರ್ಯದ ಹಿನ್ನಡೆ ಇನ್ನೂ ಚರ್ಚೆಯಲ್ಲಿವೆ. ಆದ್ದರಿಂದ 371(ಜೆ)ಯ ಪರಿಣಾಮವನ್ನು ಅಳೆಯುವಾಗ ಎಷ್ಟು ಮೀಸಲಾತಿ ಸಿಗುತ್ತಿದೆ ಎಂಬುದಷ್ಟೇ ಅಲ್ಲ, ಅದು ಜನರ ಬದುಕಿನಲ್ಲಿ ಎಷ್ಟು ಬದಲಾವಣೆ ತಂದಿದೆ ಎಂಬುದನ್ನೂ ನೋಡಬೇಕು.

**ವಿಜಯಪುರದ ಬೇಡಿಕೆ: ಪ್ರಾದೇಶಿಕ ಅಸಮಾನತೆಯ ಪ್ರಶ್ನೆ**

ಸ್ಥಳೀಯ ಹೋರಾಟಗಾರರ ಪ್ರಮುಖ ವಾದ: ಜಿಲ್ಲೆ ಬರಗಾಲ, ನೀರಾವರಿ ಕೊರತೆ, ಕೈಗಾರಿಕಾ ಹಿನ್ನಡೆ, ನಿರುದ್ಯೋಗ ಮತ್ತು ಉನ್ನತ ಶಿಕ್ಷಣದ ಅವಕಾಶಗಳ ಕೊರತೆ ಎದುರಿಸುತ್ತಿದೆ. ಕೃಷಿಯನ್ನೇ ಅವಲಂಬಿಸಿದ ಪ್ರದೇಶದಲ್ಲಿ ಮಳೆಯ ಅನಿಶ್ಚಿತತೆ ಮತ್ತು ನೀರಾವರಿ ಕೊರತೆ ಗ್ರಾಮೀಣ ಆರ್ಥಿಕತೆಗೆ ಹೊಡೆತ ನೀಡುತ್ತವೆ; ಉದ್ಯೋಗದ ಕೊರತೆ ಯುವಜನರ ಭವಿಷ್ಯದ ಮೇಲೆ ಪರಿಣಾಮ ಬೀರುತ್ತದೆ. ಇಂಥ ಬೇಡಿಕೆಯನ್ನು ನಿರ್ಲಕ್ಷಿಸುವುದು ಸುಲಭವಲ್ಲ. 2026ರ ಅಕ್ಟೋಬರ್‌ನಲ್ಲಿ ಸಿಂದಗಿಯಲ್ಲಿ ನಡೆದ ಮನವಿ ಮತ್ತು ಧರಣಿ ಈ ಕೂಗು ಸ್ಥಳೀಯ ಮಟ್ಟದಲ್ಲಿ ಜೀವಂತವಾಗಿರುವುದನ್ನು ತೋರಿಸುತ್ತದೆ.

ಆದರೆ ಒಂದು ಜಿಲ್ಲೆ ಹಿಂದುಳಿದಿದೆ ಎಂಬ ಕಾರಣಕ್ಕೆ ಅದು ತಾನಾಗಿ ಈ ವ್ಯವಸ್ಥೆಯ ವ್ಯಾಪ್ತಿಗೆ ಬರುವುದಿಲ್ಲ. 371(ಜೆ) ಸಂವಿಧಾನದ ವಿಧಿಯಾದ್ದರಿಂದ, ಹೊಸ ಜಿಲ್ಲೆಯನ್ನು ಸೇರಿಸಲು ಸಂವಿಧಾನ ತಿದ್ದುಪಡಿ ಹಾಗೂ ಅದರ ಅಡಿಯ ಆದೇಶಗಳಲ್ಲಿ ಬದಲಾವಣೆ ಬೇಕಾಗುತ್ತದೆ. ಅಂದರೆ ರಾಜ್ಯ ಸರ್ಕಾರದ ಶಿಫಾರಸು ಮತ್ತು ಸಂಸತ್ತಿನ ಅನುಮೋದನೆ ಎರಡೂ ಅಗತ್ಯ. ಬೇಡಿಕೆಯನ್ನು ನ್ಯಾಯಯುತವಾಗಿ ಪರಿಶೀಲಿಸಬೇಕು ಎನ್ನುವುದು ಒಂದು ನಿಲುವು; ಅದನ್ನು ಕಾನೂನು ಪ್ರಕ್ರಿಯೆಯಿಲ್ಲದೆ ತಕ್ಷಣ ಜಾರಿಗೊಳಿಸಬಹುದು ಎನ್ನುವುದು ಬೇರೆಯೇ ವಿಷಯ. ಈ ವ್ಯತ್ಯಾಸ ಗುರುತಿಸುವುದು ಅಗತ್ಯ.

**ಸೇರ್ಪಡೆಯಾದರೆ ಏನು ಬದಲಾಗಬಹುದು?**

ಪ್ರಸ್ತಾವನೆ ಅಂಗೀಕಾರವಾದರೆ ವಿಜಯಪುರದ ವಿದ್ಯಾರ್ಥಿಗಳಿಗೆ ಸ್ಥಳೀಯ ಪ್ರವೇಶಾವಕಾಶ, ಸರ್ಕಾರಿ ಉದ್ಯೋಗಗಳಲ್ಲಿ ಸ್ಥಳೀಯ ಮೀಸಲಾತಿ, ಮತ್ತು ಅಭಿವೃದ್ಧಿ ಯೋಜನೆಗಳಿಗೆ ವಿಶೇಷ ಆದ್ಯತೆ ಹಾಗೂ ನಿಧಿ ಸಿಗುವ ಸಾಧ್ಯತೆ ಇದೆ. ಆದರೆ ಯಾವುದು ಎಷ್ಟು ಪ್ರಮಾಣದಲ್ಲಿ ಅನ್ವಯವಾಗುತ್ತದೆ ಎಂಬುದು ಅಂತಿಮ ತಿದ್ದುಪಡಿ, ಆದೇಶಗಳು ಮತ್ತು ಅನುಷ್ಠಾನ ನಿಯಮಗಳ ಮೇಲೆ ಅವಲಂಬಿತ. ಬೇಡಿಕೆ ಸಲ್ಲಿಸಿದ ತಕ್ಷಣ ಇವೆಲ್ಲ ಸಿಗುವುದಿಲ್ಲ.

ಆದ್ದರಿಂದ ಹೋರಾಟಗಾರರು ಜಿಲ್ಲೆಯ ಹಿಂದುಳಿಕೆಯ ಬಗ್ಗೆ ವಿಶ್ವಾಸಾರ್ಹ ಅಂಕಿಅಂಶಗಳನ್ನು ಮುಂದಿಟ್ಟರೆ ಹೋರಾಟಕ್ಕೆ ಹೆಚ್ಚು ಬಲ ಸಿಗುತ್ತದೆ. ಶಿಕ್ಷಣ ಉದ್ಯೋಗದ ಲಭ್ಯತೆ, ನೀರಾವರಿ ಸ್ಥಿತಿ, ಕೈಗಾರಿಕಾ ಬೆಳವಣಿಗೆ ಮತ್ತು ತಲಾ ಅಭಿವೃದ್ಧಿ ವೆಚ್ಚದ ವಿವರಗಳು ಇದರಲ್ಲಿ ಮುಖ್ಯ.




**ಈಗಿನ ಕಲ್ಯಾಣ ಕರ್ನಾಟಕಕ್ಕೆ ನಷ್ಟವಾಗುತ್ತದೆಯೇ?**

ಇದು ಚರ್ಚೆಯ ಅತ್ಯಂತ ಸೂಕ್ಷ್ಮ ಭಾಗ. ವಿಜಯಪುರ ಸೇರ್ಪಡೆಯಿಂದ ಈಗಿನ ಜಿಲ್ಲೆಗಳಿಗೆ ನಷ್ಟವಾಗುತ್ತದೆ ಎಂದು ಈಗಲೇ ತೀರ್ಮಾನಿಸುವುದೂ ಸರಿಯಲ್ಲ, ಏನೂ ಪರಿಣಾಮವಾಗುವುದಿಲ್ಲ ಎಂದು ಹೇಳುವುದೂ ಸರಿಯಲ್ಲ. ಪರಿಣಾಮ ಯಾವ ವ್ಯವಸ್ಥೆ ರೂಪಿಸಲಾಗುತ್ತದೆ ಎನ್ನುವುದರ ಮೇಲೆ ನಿಂತಿದೆ.

ರಾಜ್ಯಮಟ್ಟದ ಹುದ್ದೆಗಳ ಶೇ. 8ರ ಮೀಸಲಾತಿಯ ವ್ಯಾಪ್ತಿ ಮತ್ತು ಪ್ರಮಾಣವನ್ನು ಸೇರ್ಪಡೆಯ ನಂತರ ಬದಲಿಸಬೇಕೇ, ಬೇರೆ ವ್ಯವಸ್ಥೆ ರೂಪಿಸಬೇಕೇ ಎಂಬುದಕ್ಕೆ ಕಾನೂನುಬದ್ಧ ಸ್ಪಷ್ಟತೆ ಬೇಕು. ಶಿಕ್ಷಣದಲ್ಲಿಯೂ ಪ್ರದೇಶದೊಳಗಿನ ಸಂಸ್ಥೆಗಳ ನಿಯಮ ಮತ್ತು ರಾಜ್ಯಮಟ್ಟದ ಸಂಸ್ಥೆಗಳ ನಿಯಮ ಬೇರೆ ಬೇರೆ; ಎಲ್ಲ ಸೀಟುಗಳೂ ಒಂದೇ ರೀತಿ ಹಂಚಿಕೆಯಾಗುತ್ತವೆ ಎಂದು ಊಹಿಸುವುದು ತಪ್ಪು. ಆದರೂ ಅರ್ಹ ಅಭ್ಯರ್ಥಿಗಳ ಸಂಖ್ಯೆ ಹೆಚ್ಚಿದರೆ ಇರುವ ಅವಕಾಶಗಳ ಮೇಲೆ ಸ್ಪರ್ಧೆಯ ಒತ್ತಡ ಹೆಚ್ಚುವ ಸಾಧ್ಯತೆಯನ್ನು ನಿರ್ಲಕ್ಷಿಸಲಾಗದು. ಈ ಆತಂಕವನ್ನು ರಾಜಕೀಯ ಪ್ರಚಾರದ ಸರಕಾಗಿಸದೆ ಅಂಕಿಅಂಶಗಳಿಂದ ಪರಿಶೀಲಿಸಬೇಕು.

ದೀರ್ಘ ಹೋರಾಟದ ಮೂಲಕ ಏಳೂ ಜಿಲ್ಲೆಗಳ ಜನ ಪಡೆದ ಸೌಲಭ್ಯಗಳ ರಕ್ಷಣೆ ಅಷ್ಟೇ ಮುಖ್ಯ. ಒಂದು ಪ್ರದೇಶದ ಹಕ್ಕನ್ನು ವಿಸ್ತರಿಸುವಾಗ ಮತ್ತೊಂದರ ಹಕ್ಕು ದುರ್ಬಲವಾಗದಂತೆ ನೋಡಿಕೊಳ್ಳುವುದು ಸರ್ಕಾರದ ಹೊಣೆ.

**ಅಭಿವೃದ್ಧಿ ನಿಧಿ: ಹೆಚ್ಚುವರಿ ಹಣವಿಲ್ಲದೆ ನ್ಯಾಯ ಸಾಧ್ಯವೇ?**

ಮೀಸಲಾತಿಯಷ್ಟೇ ಮಹತ್ವದ ಪ್ರಶ್ನೆ ನಿಧಿಯದು. ಹೊಸ ಜಿಲ್ಲೆಯ ಅಗತ್ಯಕ್ಕೆ ಎಷ್ಟು ಹೆಚ್ಚುವರಿ ಹಣ ಬೇಕು ಎಂದು ಸರ್ಕಾರ ಲೆಕ್ಕ ಹಾಕಬೇಕು. ಒಟ್ಟು ನಿಧಿ ಹೆಚ್ಚದೆ ಅದೇ ಮೊತ್ತವನ್ನು ಹೆಚ್ಚು ಜಿಲ್ಲೆಗಳ ನಡುವೆ ಹಂಚಿದರೆ, ಈಗಿನ ಜಿಲ್ಲೆಗಳ ಪಾಲಿನ ಮೇಲೆ ಒತ್ತಡ ಬೀಳುವ ಸಾಧ್ಯತೆ ಇದೆ. ಅದು ಅನಿವಾರ್ಯ ಎಂದೇನಿಲ್ಲ; ಹೆಚ್ಚುವರಿ ಅನುದಾನ ಮತ್ತು ಹಂಚಿಕೆ ನೀತಿ ಇದನ್ನು ನಿರ್ಧರಿಸುತ್ತವೆ. ನೀರಾವರಿ, ಗ್ರಾಮೀಣ ರಸ್ತೆ, ಶಾಲೆ, ಆಸ್ಪತ್ರೆ, ಕೌಶಲ್ಯ ಕೇಂದ್ರ ಮತ್ತು ಕೈಗಾರಿಕಾ ಮೂಲಸೌಕರ್ಯಗಳಿಗೆ ಜಿಲ್ಲಾವಾರು ಗುರಿ ನಿಗದಿಪಡಿಸುವುದು ಪರಿಣಾಮಕಾರಿ ಮಾರ್ಗವಾಗಬಹುದು.

**ಇತಿಹಾಸ ಮಾತ್ರ ಸಾಕೇ?**

ವಿಜಯಪುರ ಹಿಂದೆ ಹೈದರಾಬಾದ್ ಆಡಳಿತದ ಭಾಗವಾಗಿತ್ತು ಎಂಬ ವಾದವನ್ನು ಕೆಲವರು ಮುಂದಿಡುತ್ತಾರೆ. ಜಿಲ್ಲಾಡಳಿತದ ಇತಿಹಾಸದ ಪ್ರಕಾರ 1724ರಲ್ಲಿ ನಿಜಾಮ ಸ್ವತಂತ್ರ ಆಡಳಿತ ಸ್ಥಾಪಿಸಿದಾಗ ವಿಜಯಪುರವೂ ಅವರ ಅಧೀನವಾಗಿತ್ತು; 1760ರಲ್ಲಿ ಅದು ಮರಾಠರ ಕೈಗೆ ಹೋಯಿತು, ನಂತರ ಬ್ರಿಟಿಷರ ಆಳ್ವಿಕೆಗೆ ಒಳಪಟ್ಟಿತು. ಅಂದರೆ ನಿಜಾಮರ ಅಧೀನದಲ್ಲಿದ್ದದ್ದು ಕೆಲವೇ ದಶಕ. ಸ್ವಾತಂತ್ರ್ಯಾನಂತರ 1956ರ ರಾಜ್ಯ ಪುನರ್ವಿಂಗಡಣೆಯ ಹೊತ್ತಿಗೆ ಹೈದರಾಬಾದ್ ರಾಜ್ಯದಲ್ಲಿದ್ದ ಜಿಲ್ಲೆಗಳೇ ಹೈದರಾಬಾದ್ ಕರ್ನಾಟಕವಾದವು. ವಿಜಯಪುರ ಬಾಂಬೆ ಪ್ರಾಂತ್ಯದಿಂದ ಬಂದು ಬಾಂಬೆ ಕರ್ನಾಟಕ (ಈಗ ಕಿತ್ತೂರು ಕರ್ನಾಟಕ) ಭಾಗವಾಯಿತು.

ಹೀಗಾಗಿ "ಹೈದರಾಬಾದ್ ಇತಿಹಾಸ"ವೊಂದೇ ಈ ಬೇಡಿಕೆಗೆ ಬಲವಾದ



ಆಧಾರವಾಗಲಾರದು. ಬೇಡಿಕೆಯ ನಿಜವಾದ ಶಕ್ತಿ ಇರುವುದು ಅಂದಿನ ಇತಿಹಾಸದಲ್ಲಲ್ಲ, ಇಂದಿನ ಹಿಂದುಳಿಕೆಯ ಅಂಕಿಅಂಶಗಳಲ್ಲಿ. ಇಂದಿನ 371(ಜೆ) ವ್ಯಾಪ್ತಿಯನ್ನು ನಿರ್ಧರಿಸುವುದು ಸಂವಿಧಾನದ ದಾಖಲೆಗಳು, ಆದೇಶಗಳು ಮತ್ತು ಕಾನೂನು ಪ್ರಕ್ರಿಯೆಯೇ.

**ಪರಿಹಾರದ ದಾರಿ: ಸೇರ್ಪಡೆಗೆ ಮುನ್ನ ಸ್ಪಷ್ಟ ನೀತಿ**

ಈ ಪ್ರಶ್ನೆಯನ್ನು ರಾಜಕೀಯ ಲಾಭ ನಷ್ಟಕ್ಕೆ ಸೀಮಿತಗೊಳಿಸದೆ ಸಮಗ್ರವಾಗಿ ನೋಡಬೇಕು:

ವಿಜಯಪುರದ ಹಿಂದುಳಿಕೆಯ ಬಗ್ಗೆ ಶಿಕ್ಷಣ, ಉದ್ಯೋಗ, ಆರೋಗ್ಯ, ನೀರಾವರಿ, ಕೈಗಾರಿಕೆ, ಮೂಲಸೌಕರ್ಯದ ವಿಶ್ವಾಸಾರ್ಹ ಅಂಕಿ ಅಂಶ ಸಂಗ್ರಹಿಸಬೇಕು.

ಈಗಿನ 371(ಜೆ) ಅಡಿ ಕಲ್ಯಾಣ ಕರ್ನಾಟಕಕ್ಕೆ ಸಿಗುತ್ತಿರುವ ಸೌಲಭ್ಯ ಮತ್ತು ಅವುಗಳ ಅನುಷ್ಠಾನದ ಸ್ಥಿತಿ ಪರಿಶೀಲಿಸಬೇಕು.

ಸೇರ್ಪಡೆಯ ಪರಿಣಾಮವನ್ನು ಕಾನೂನು ತಜ್ಞರು ಮತ್ತು ಆಡಳಿತ ಸಂಸ್ಥೆಗಳ ಮೂಲಕ ಅಧ್ಯಯನ ಮಾಡಿಸಬೇಕು.

ಈಗಿನ ಜಿಲ್ಲೆಗಳ ಯೋಜನೆಗಳಿಗೆ ಧಕ್ಕೆಯಾಗದಂತೆ ಹೆಚ್ಚುವರಿ ನಿಧಿಯ ಸ್ಪಷ್ಟ ಪ್ರಸ್ತಾವ ರೂಪಿಸಬೇಕು.

ರಾಜ್ಯ ಮತ್ತು ಕೇಂದ್ರ ಸರ್ಕಾರಗಳ ಸಾಂವಿಧಾನಿಕ ಜವಾಬ್ದಾರಿ ಹಾಗೂ ಅಗತ್ಯ ಪ್ರಕ್ರಿಯೆಯನ್ನು ಸಾರ್ವಜನಿಕರ ಮುಂದಿಡಬೇಕು.

ಇದರಿಂದ ವಿಜಯಪುರದ ಬೇಡಿಕೆಯನ್ನು ಗಂಭೀರವಾಗಿ ಪರಿಶೀಲಿಸಬಹುದು, ಜೊತೆಗೆ ಕಲ್ಯಾಣ ಕರ್ನಾಟಕದ ಜನರ ಆತಂಕಗಳಿಗೂ ವಾಸ್ತವಿಕ ಉತ್ತರ ನೀಡಬಹುದು. ಒಂದು ಪರ್ಯಾಯವನ್ನೂ ಪರಿಗಣಿಸಬಹುದು: ಸಂವಿಧಾನ ತಿದ್ದುಪಡಿಯ ಸುದೀರ್ಘ ದಾರಿಗೆ ಮುನ್ನ, ಉತ್ತರ ಕರ್ನಾಟಕದ ಬರಪೀಡಿತ ಜಿಲ್ಲೆಗಳಿಗೆ ರಾಜ್ಯ ಸರ್ಕಾರವೇ ವಿಶೇಷ ಅಭಿವೃದ್ಧಿ ಪ್ಯಾಕೇಜ್ ಘೋಷಿಸಬಹುದು.

**ಕೊನೆಯ ಮಾತು**

**ನ್ಯಾಯದ ವಿಸ್ತರಣೆಯಾಗಲಿ, ಹಕ್ಕುಗಳ ಸಂಘರ್ಷವಲ್ಲ**

ವಿಜಯಪುರದ ಹೋರಾಟವನ್ನು ಒಂದು ಜಿಲ್ಲೆಯ ಮೀಸಲಾತಿ ಬೇಡಿಕೆಯಾಗಿ ಮಾತ್ರ ನೋಡುವುದು ಅಪೂರ್ಣ ದೃಷ್ಟಿ. ಇದು ಪ್ರಾದೇಶಿಕ ಅಸಮಾನತೆ, ಸಮಾನ ಅವಕಾಶ ಮತ್ತು ಅಭಿವೃದ್ಧಿಯ ಹಕ್ಕಿನ ಪ್ರಶ್ನೆ. ವಿಜಯಪುರದ ಜನರ ಬೇಡಿಕೆಯ ಹಿಂದಿನ ವಾಸ್ತವ ಸಮಸ್ಯೆಗಳನ್ನು ಪರಿಶೀಲಿಸುವುದು ಸರ್ಕಾರದ ಕರ್ತವ್ಯ; ಅದೇ ಹೊತ್ತಿಗೆ ಕಲ್ಯಾಣ ಕರ್ನಾಟಕದ ಜನ ಪಡೆದ ಹಕ್ಕುಗಳನ್ನೂ ರಕ್ಷಿಸಬೇಕು.

ಒಂದು ಪ್ರದೇಶಕ್ಕೆ ನ್ಯಾಯ ನೀಡುವ ಹೆಸರಿನಲ್ಲಿ ಮತ್ತೊಂದರ ಹಕ್ಕಿಗೆ ಧಕ್ಕೆಯಾಗಬಾರದು; ಅದೇ ರೀತಿ ಸ್ಥಿರತೆಯ ಹೆಸರಿನಲ್ಲಿ ನ್ಯಾಯಯುತ ಹೊಸ ಬೇಡಿಕೆಯನ್ನು ಪರಿಶೀಲಿಸದೆ ತಳ್ಳಿಹಾಕುವುದೂ ಸರಿಯಲ್ಲ. ನಿರ್ಧಾರ ಘೋಷಣೆಗಳ ಮೇಲಾಗಲಿ, ರಾಜಕೀಯ ಲೆಕ್ಕಾಚಾರದ ಮೇಲಾಗಲಿ ನಿಲ್ಲಬಾರದು; ಸಂವಿಧಾನದ ಸ್ಪಷ್ಟತೆ, ವಾಸ್ತವ ಅಂಕಿಅಂಶ ಮತ್ತು ನ್ಯಾಯಯುತ ನಿಧಿ ಹಂಚಿಕೆಯ ಮೇಲೆ ನಿಲ್ಲಬೇಕು.

ಏಕೆಂದರೆ ನಿಜವಾದ ಅಭಿವೃದ್ಧಿ ಎಂದರೆ ಒಂದು ಪ್ರದೇಶದ ಪ್ರಗತಿಗಾಗಿ ಮತ್ತೊಂದನ್ನು ಹಿಂದುಳಿಸುವುದಲ್ಲ; ಹಿಂದುಳಿದ ಪ್ರತಿ ಪ್ರದೇಶಕ್ಕೂ ನ್ಯಾಯಯುತ ಅವಕಾಶ ಒದಗಿಸುವುದು.

# ಧರ್ಮವಿಜಯದ ದಸರಾ ಹೊರಗೆ ಹಬ್ಬದ ಸಂಭ್ರಮ; ಒಳಗೆ ಒಳ್ಳೆಯತನದ ಬೆಳಕು

ಮನದ ಕಳೆ ಕೀಳೋಣ, ಧರ್ಮವಿಜಯದ ದಸರಾ ಆಚರಿಸೋಣ

■ ಉದಯರಶ್ಮಿ ದಿನಪತ್ರಿಕೆ

ದಸರಾ ಬಂತೆಂದರೆ ಹಳ್ಳಿ ಮನೆಗಳಲ್ಲಿ ಸಂಭ್ರಮವೋ ಸಂಭ್ರಮ. ಮನೆ ಸ್ವಚ್ಛಗೊಳಿಸಿ, ಬಾಗಿಲಿಗೆ ತೋರಣ ಕಟ್ಟಿ, ದೇವರ ಮುಂದೆ ದೀಪ ಹಚ್ಚಿ, ಭಕ್ತಿಯಿಂದ ಕೈಮುಗಿಯುವ ಹಬ್ಬವಿದು. ದುಡಿಮೆಗೆ ನೆರವಾದ ನೇಗಿಲು, ಕುಡಗೋಲು, ಕೃಷಿ ಉಪಕರಣಗಳಿಗೆ ಪೂಜೆ ಸಲ್ಲಿಸಿ ಕೃತಜ್ಞತೆ ತೋರುವ ಸಂದರ್ಭವೂ ಹೌದು. ಬನ್ನಿ ಎಲೆ ಹಂಚಿಕೊಂಡು, ಹಿರಿಯರ ಕಾಲಿಗೆ ನಮಸ್ಕರಿಸಿ, ಆಶೀರ್ವಾದ ಪಡೆಯುವ ಈ ಹಬ್ಬ ನಮ್ಮ ಬದುಕಿನ ಬಾಂಧವ್ಯವನ್ನು ಗಟ್ಟಿಗೊಳಿಸುತ್ತದೆ.

ನಮ್ಮ ಸಂಸ್ಕೃತಿಯಲ್ಲಿ ಒಂಬತ್ತು ಸಂಖ್ಯೆಗೆ ವಿಶೇಷ ಸ್ಥಾನವಿದೆ. ನವರಾತ್ರಿ, ನವಗ್ರಹ, ನವರಸ, ನವರತ್ನಗಳ ಪರಿಕಲ್ಪನೆಗಳಲ್ಲಿ ಇದನ್ನು ಕಾಣುತ್ತೇವೆ. ದೇವರ ಮಹಿಮೆ ಕೇಳುವುದು, ಕೀರ್ತನೆ ಹಾಡುವುದು, ಸ್ಮರಿಸುವುದು, ಸೇವೆ ಸಲ್ಲಿಸುವುದು ಸೇರಿದಂತೆ ನವವಿಧ ಭಕ್ತಿಮಾರ್ಗಗಳಿವೆ. ಇವೆಲ್ಲದರ ಆಶಯ




ಮನಸ್ಸನ್ನು ಒಳ್ಳೆಯ ದಾರಿಗೆ ತರುವುದೇ ಆಗಿದೆ.

ನವರಾತ್ರಿಯ ಒಂಬತ್ತು ದಿನ ಮಹಾಕಾಳಿ, ಮಹಾಲಕ್ಷ್ಮಿ, ಮಹಾಸರಸ್ವತಿಯರನ್ನು ಭಕ್ತಿಯಿಂದ ಆರಾಧಿಸಲಾಗುತ್ತದೆ. ಮನೆಗಳಲ್ಲೂ ದೇವಾಲಯಗಳಲ್ಲೂ ಪೂಜೆ, ದೀಪಾರಾಧನೆ, ಪುರಾಣ ಪ್ರವಚನಗಳು ನಡೆಯುತ್ತವೆ. ಊರಿಂದ ಊರಿಗೆ ಆಚರಣೆಯ ರೀತಿ ಬೇರೆಯಾದರೂ, ಕೆಡುಕನ್ನು ತೊರೆದು ಒಳಿತನ್ನು ಬೆಳೆಸಬೇಕೆಂಬ ಸಂದೇಶ ಎಲ್ಲೆಡೆಯೂ ಒಂದೇ.

ದುರ್ಗಾದೇವಿ ಮಹಿಷಾಸುರನನ್ನು ಸಂಹರಿಸಿದ ಕಥೆಯನ್ನು ಕೇಳಿ ಸಂತಸಪಡುವ ನಾವು, ನಮ್ಮೊಳಗಿನ ಕೆಟ್ಟ ಗುಣಗಳನ್ನೂ ಒಮ್ಮೆ ನೋಡಿಕೊಳ್ಳಬೇಕು. ಕಾಮ, ಕ್ರೋಧ, ಮೋಹ, ಲೋಭ, ಮದ, ಮತ್ಸರ, ಡಾಂಭಿಕತನ, ಅಸತ್ಯ ಮತ್ತು ಕ್ರೌರ್ಯಗಳು ಮನುಷ್ಯನ ನೆಮ್ಮದಿಯನ್ನು ಕಸಿದುಕೊಳ್ಳುತ್ತವೆ. ಹೊಲದಲ್ಲಿ ಕಳೆ ಬೆಳೆದರೆ ಬೆಳೆ ಸೊರಗುವಂತೆ, ಮನಸ್ಸಿನಲ್ಲಿ ಕೆಟ್ಟ ಗುಣಗಳು ಬೆಳೆದರೆ ಒಳ್ಳೆಯತನ ಸೊರಗುತ್ತದೆ. ಹೊಲದ




ಕಳೆ ಕೀಳುವಷ್ಟೇ ಕಾಳಜಿಯಿಂದ ಮನದ ಕಳೆಯನ್ನೂ ಕೀಳಬೇಕು.

ಪೂಜೆ, ಉಪವಾಸ, ವ್ರತ, ಸತ್ಕಥೆಗಳ ಶ್ರವಣ ನಮ್ಮ ನಡೆನುಡಿಯನ್ನು ತಿದ್ದಿಕೊಳ್ಳಲು ನೆರವಾಗಬೇಕು. ಹಸಿದವರಿಗೆ ಅನ್ನ ಕೊಡುವುದು, ಕಷ್ಟದಲ್ಲಿದ್ದವರಿಗೆ ನೆರವಾಗುವುದು, ನೆರೆಹೊರೆಯವರೊಂದಿಗೆ ಪ್ರೀತಿಯಿಂದ ಬಾಳುವುದು ಹಬ್ಬಕ್ಕೆ ಮತ್ತಷ್ಟು ಅರ್ಥ ತರುತ್ತವೆ. ಬನ್ನಿ ಎಲೆಯನ್ನು ಬಂಗಾರವೆಂದು ಹಂಚುವ ಕೈಗಳು, ಒಡೆದ ಮನಸ್ಸುಗಳನ್ನು ಬೆಸೆಯುವ ಕೆಲಸವನ್ನೂ ಮಾಡಲಿ. ಹಳೆಯ ದ್ವೇಷ ಮರೆತು ಹೊಸ ಸ್ನೇಹ ಬೆಳೆಸೋಣ.

ನವರಾತ್ರಿಯ ಸಂಭ್ರಮಕ್ಕೆ ಪೂರ್ಣತೆ ತರುವ ವಿಜಯದಶಮಿ ಹೊಸ ಕೆಲಸಗಳಿಗೆ ಶುಭಾರಂಭ ಮಾಡುವ ದಿನವೆಂದು ಪರಿಗಣಿಸಲಾಗುತ್ತದೆ. ವಿದ್ಯಾರಂಭ, ಪುಸ್ತಕ ಪೂಜೆ, ಆಯುಧಪೂಜೆ, ಶಮೀಪೂಜೆಯ ಆಚರಣೆಗಳು ಜ್ಞಾನ, ದುಡಿಮೆ ಮತ್ತು ಪ್ರಕೃತಿಯ ಬಗ್ಗೆ ಗೌರವವನ್ನು ಕಲಿಸುತ್ತವೆ.

ಈ ದಸರಾ ಪ್ರತಿಯೊಂದು ಮನೆಯಲ್ಲೂ ಆರೋಗ್ಯ, ಸುಖ, ಶಾಂತಿ ಮತ್ತು ನೆಮ್ಮದಿ ತರಲಿ. ರೈತನ ಹೊಲದಲ್ಲಿ ಸಮೃದ್ಧ ಬೆಳೆ ಬೆಳೆಯಲಿ; ಮಕ್ಕಳ ಮನದಲ್ಲಿ ವಿದ್ಯೆಯ ಬೆಳಕು ಮೂಡಲಿ. ನಮ್ಮೊಳಗಿನ ಕೆಡುಕು ಸೋತು, ಒಳ್ಳೆಯತನ ಗೆಲ್ಲಲಿ. ಅದೇ ಧರ್ಮವಿಜಯದ ದಸರಾದ ಸಾರ್ಥಕತೆ.

– ಸಿದ್ಧಲಿಂಗ ಚೌಧರಿ.
ಶಿಕ್ಷಕರು, ಸಿಂದಗಿ
ವಿಜಯಪುರ ಜಿಲ್ಲೆ



# ಅಥಣಿ ಸರ್ಕಾರಿ ಕಾಲೇಜಿನಲ್ಲಿ ಆಕರ್ಷಕ ಅಣುಕು ಸಂಸತ್ ಕಲಾಪ

■ ಉದಯರಶ್ಮಿ ದಿನಪತ್ರಿಕೆ



ಅಥಣಿ: ದೇಶದ ಜ್ವಲಂತ ಸಮಸ್ಯೆಗಳಾದ ಬಡತನ, ನಿರುದ್ಯೋಗ, ಅನಕ್ಷರತೆ, ಮಹಿಳಾ ಸಬಲೀಕರಣ ಹಾಗೂ ಮಹಿಳೆಯರಿಗೆ ಲೋಕಸಭೆ ಮತ್ತು ವಿಧಾನಸಭೆಗಳಲ್ಲಿ ಮೀಸಲಾತಿ ಕಲ್ಪಿಸುವ 'ನಾರಿ ಶಕ್ತಿ ವಂದನ್ ಅಧಿನಿಯಮ' ಸೇರಿದಂತೆ ಸರ್ಕಾರದ ವಿವಿಧ ಕಾರ್ಯಕ್ರಮಗಳು ಹಾಗೂ ವೈಫಲ್ಯಗಳ ಕುರಿತು ಆಡಳಿತ ಪಕ್ಷದ ಸಚಿವರನ್ನು ವಿರೋಧ ಪಕ್ಷದ ನಾಯಕರು ತೀವ್ರವಾಗಿ ತರಾಟೆಗೆ ತೆಗೆದುಕೊಂಡರೆ,ಆಡಳಿತ ಪಕ್ಷದ ಸದಸ್ಯರು ಹಾಗೂ ಸಚಿವರು ವಿರೋಧ ಪಕ್ಷಗಳ ಪ್ರತಿಯೊಂದು ಪ್ರಶ್ನೆಗೆ ಸೂಕ್ತ ಅಂಕಿ-ಅಂಶಗಳ ಸಹಿತ ಮರುಉತ್ತರ ನೀಡಿ ತಮ್ಮ ಸರ್ಕಾರದ ಯೋಜನೆಗಳು ಮತ್ತು ಸಾಧನೆಗಳನ್ನು ಬಲವಾಗಿ ಸಮರ್ಥಿಸಿಕೊಂಡರು. ಇದು ಯಾವುದೇ ರಾಜ್ಯದ ವಿಧಾನಸಭೆಯ ಅಥವಾ ದೇಶದ ಲೋಕಸಭೆಯ ನೇರ ಕಲಾಪದ ದೃಶ್ಯವಲ್ಲ! ವಿದ್ಯಾರ್ಥಿಗಳಿಗೆ ಪ್ರಜಾಸತ್ತಾತ್ಮಕ ಮೌಲ್ಯಗಳು, ಸಂಸದೀಯ ಪ್ರಕ್ರಿಯೆ ಹಾಗೂ ಕಲಾಪ ನಿರ್ವಹಣೆಯ ಕುರಿತು ಅರಿವು ಮೂಡಿಸಲು ತಾಲೂಕು ಆಡಳಿತ, ಸಮಾಜ ಕಲ್ಯಾಣ ಇಲಾಖೆ, ಶಾಲಾ ಶಿಕ್ಷಣ ಮತ್ತು ಸಾಕ್ಷರತೆ ಇಲಾಖೆ ಹಾಗೂ ಉನ್ನತ ಶಿಕ್ಷಣ ಇಲಾಖೆಗಳ ಸಯೋಗದಲ್ಲಿ ಅಥಣಿಯ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಸಭಾಂಗಣದಲ್ಲಿ ಆಯೋಜಿಸಲಾಗಿದ್ದ 'ಯುವ ಸಂಸತ್ತು' ಕಾರ್ಯಕ್ರಮದ ರೋಚಕ ದೃಶ್ಯ.

ಕಾಲೇಜಿನ ಸಭಾಂಗಣದಲ್ಲಿ ನಡೆದ ಈ ಕಾರ್ಯಕ್ರಮದಲ್ಲಿ ವಿದ್ಯಾರ್ಥಿಗಳು ಪ್ರಧಾನಮಂತ್ರಿ, ಸಚಿವರು, ವಿರೋಧ ಪಕ್ಷದ ನಾಯಕರು ಹಾಗೂ ಸಂಸದರ ಪಾತ್ರಗಳಲ್ಲಿ ಪರಕಾಯ ಪ್ರವೇಶ ಮಾಡಿದ್ದರು. ಕಲಾಪದ ವೇಳೆ ಪ್ರಶ್ನೋತ್ತರ ಕಲಾಪ, ಶೂನ್ಯ ವೇಳೆ ಹಾಗೂ ಪ್ರಮುಖ ಕಾಯ್ದೆಗಳ ಕುರಿತು ನಡೆದ ಗಂಭೀರ ಚರ್ಚೆಯು ನಿಜವಾದ ಸಂಸತ್ತಿನ ವಾತಾವರಣವನ್ನೇ ಮರುಸೃಷ್ಟಿಸಿತು.

ಪ್ರಾಸ್ತಾವಿಕ ಮಾತುಗಳನ್ನಾಡಿದ ರಾಜ್ಯಶಾಸ್ತ್ರ ವಿಭಾಗದ ಸಹಾಯಕ ಪ್ರಾಧ್ಯಾಪಕ ರಾಜು ಬಜಂತ್ರಿ ವಿದ್ಯಾರ್ಥಿಗಳು ಇಂತಹ ವೇದಿಕೆಗಳನ್ನು ಬಳಸಿಕೊಂಡು ನಾಯಕತ್ವ ಗುಣವನ್ನು ಅಳವಡಿಸಿಕೊಳ್ಳಬೇಕು ಎಂದು ಕರೆ ನೀಡಿದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಇಂಗ್ಲಿಷ್ ವಿಭಾಗದ ಮುಖ್ಯಸ್ಥರಾದ ಡಾ. ಶಾಂತಿನಾಥ್ ಬಳೋಜ ಪ್ರಜಾಪ್ರಭುತ್ವ ವ್ಯವಸ್ಥೆಯು ಇತರೆ ಎಲ್ಲಾ ಮಾದ-ರಿಯ ಸರ್ಕಾರಗಳಲ್ಲಿಯೇ ಅತ್ಯುತ್ತಮವಾದ ಸರ್ಕಾರದ ಪದ್ಧತಿಯಾಗಿದೆ ಎಂದು ಹೇಳಿ ವಿದ್ಯಾರ್ಥಿಗಳ ಕಾರ್ಯಕ್ಷಮತೆ ಮತ್ತು ಉತ್ಸಾಹವನ್ನು ಶ್ಲಾಘಿಸಿದರು. ತಾಲೂಕ ಸಮಾಜ ಕಲ್ಯಾಣ ಅಧಿಕಾರಿಗಳಾದ ಪರಶುರಾಮ ಪತ್ತಾರ ಮಾತನಾಡಿ ಯುವಜನರಲ್ಲಿ ರಾಜಕೀಯ ಜಾಗೃತಿ, ನಾಯಕತ್ವ ಗುಣ ಹಾಗೂ ಸಂವಿಧಾನದ ಮೌಲ್ಯಗಳನ್ನು ಬೆಳೆಸಲು ಇಂತಹ 'ಯುವ ಸಂಸತ್ತು' ಕಾರ್ಯಕ್ರಮಗಳು ಅತ್ಯಂತ ಪೂರಕವಾಗಿವೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು. ಪ್ರಧಾನಮಂತ್ರಿಯಾಗಿ ಶಿವಾನಿ ಕೊಡಗ, ವಿರೋಧ ಪಕ್ಷದ ನಾಯಕಿಯಾಗಿ ಸಾನಿಕಾ ಧನಗರ ಮತ್ತು ಸಭಾಪತಿಯಾಗಿ ವಿದ್ಯಾಶ್ರೀ ಪಾಟೀಲ ಭಾಗವಹಿಸಿದ್ದರು.

ಈ ಸಂದರ್ಭದಲ್ಲಿ ಇತಿಹಾಸ ವಿಭಾಗದ ಮುಖ್ಯಸ್ಥರಾದ ಬಿ ಐ ಮಠಪತಿ ರಾಜ್ಯಶಾಸ್ತ್ರ ವಿಭಾಗದ ಮುಖ್ಯಸ್ಥರಾದ ಶ್ರೀ ಸೋಮಲಿಂಗ ಪಾಟೀಲ್, ರಾಜ್ಯಶಾಸ್ತ್ರ ಸಹಾಯಕ ಪ್ರಾಧ್ಯಾಪಕರಾದ ಡಾ ಸುರೇಶ್ ತಾಕತರಾವ, ಡಾಕ್ಟರ್ ಎಂ ಎ ಚನ್ನಾಪುರ ಮುಂತಾದವರು ಉಪಸ್ಥಿತ-ರಿದ್ದರು. ಸಂಗಮೇಶ ಹಚಡದ ಅವರು ಕಾರ್ಯಕ್ರಮವನ್ನು ನಿರೂಪಿಸಿದರು.

# ಕವಿಗಳ ಲೇಖನಿ ಸಮಾಜಕ್ಕೆ ಕೈಗನ್ನಡಿಯಾಗಲಿ :ಕುಚಬಾಳ

■ ಉದಯರಶ್ಮಿ ದಿನಪತ್ರಿಕೆ



ಸಿಂದಗಿ: ಕವಿಗಳಿಗೆ ಲೇಖನಿಯೇ ಆಯುಧ. ವ್ಯವಸ್ಥೆಯಲ್ಲಿ ತಪ್ಪುಗಳನ್ನು ಹರಿತ ಲೇಖನಿಯಿಂದ ಸರಿಪಡಿಸಿ ಕವಿಗಳು ಸಮಾಜದ ಕೈಗನ್ನಡಿಯಾಗಬೇಕು ಎಂದು ಕನ್ನಡ ಸಾಹಿತ್ಯ ಗೆಳೆಯರ ಬಳಗದ ಅಧ್ಯಕ್ಷ ರಾಜಶೇಖರ ಕುಚಬಾಳ ಹೇಳಿದರು.

ಪಟ್ಟಣದ ಹೊರ ವಲಯದ ಶಾಂತಿನಿಕೇತನ ಪ್ರೌಢಶಾಲೆಯಲ್ಲಿ ಕನ್ನಡ ಸಾಹಿತ್ಯ ಗೆಳೆಯರ ಬಳಗ ಹಾಗೂ ನಬಿರೋಶನ್ ಪ್ರಕಾಶನ ಬೋರಗಿ ವತಿಯಿಂದ ನಾಡಹಬ್ಬ ದಸರಾ ಪ್ರಯುಕ್ತ ಹಮ್ಮಿಕೊಂಡ ಕವಿಗೋಷ್ಠಿ ಹಾಗೂ ಸನ್ಮಾನ ಸಮಾರಂಭದಲ್ಲಿ ಭಾಗವಹಿಸಿ ಮಾತನಾಡಿದರು. ಕಲುಷಿತಗೊಂಡ ಇಂದಿನ ಸಮಾಜವನ್ನು ಪರಿಶುದ್ಧ ಗೊಳಿಸಲು ಕವಿಗಳು, ಲೇಖಕರು, ಸಾಹಿತಿಗಳು ತಮ್ಮ ಬರವಣಿಗೆಯ ಮೂಲಕ ಶ್ರಮಿಸಬೇಕು ಎಂದರು.

ಅಧ್ಯಕ್ಷತೆ ವಹಿಸಿ ಮಾತನಾಡಿದ ಹಿರಿಯ ವರದಿಗಾರ ಶಾಂತು ಹಿರೇಮಠ ತಾಲೂಕಿನಲ್ಲಿ ಬಹಳಷ್ಟು ಉದಯೋನ್ಮುಖ ಕವಿಗಳು, ಕಲಾ ಆರಾಧಕರು ಸೇ-ರಿದಂತೆ ಹಲವು ಪ್ರತಿಭೆಗಳಿವೆ ಅವರನ್ನು ಒಂದುಗೂಡಿಸಿ ಅವರಲ್ಲಿನ ಕಲಾ ಪ್ರತಿಭೆ ಹೊರ ಹಾಕಲು ಸಾಹಿತಿಕ ಮತ್ತು ಕಲಾ ಕಮ್ಮಟ ಶಿಬಿರಗಳನ್ನು ಏರ್ಪಡಿಸಬೇಕು ಎಂದರು. ತಾಲೂಕು ಕಸಾಪ ಮಾಜಿ ಅಧ್ಯಕ್ಷ ಸಿದ್ಧಲಿಂಗ ಚೌಧರಿ, ವರದಿಗಾರ ಕಬೂಲ ಕೊಕಟನೂರ, ಉದ್ಯಮಿ ಸಿದ್ದು ಚಿಂಚೊಳ್ಳಿ, ವೈದ್ಯ ಶ್ರೀದೇವಿ ಬಿರಾದಾರ ಮಾತನಾಡಿದರು. ಆರಕ್ಷಕ ಮೌಲಾಲಿ ಆಲಗೂರ ಸ್ವಾಗತ ಜೊತೆಗೆ ಪ್ರಸ್ತಾವಿಕ ಮಾತನಾಡಿ, ನಬಿರೋಶನ್ ಪ್ರಕಾಶನದ ಸಾಮಾಜಿಕ ಕೆಲಸಗಳ ಕುರಿತು ತಿಳಿಸಿದರು. ರಾಂಪೂರ ಆರೂಢ ಮಠದ ಪೀಠಾಧಿಪತಿ ನಿತ್ಯಾನಂದ ಮಹಾರಾಜರು ಆಶೀರ್ವಚನ ನೀಡಿದರು.

ಇದೆ ವೇಳೆ ಸಿಂದಗಿ, ಆಲಮೇಲ, ದೇವರ ಹಿಪ್ಪರಗಿ ಕರ್ನಾಟಕ ರಾಜ್ಯ ಪದವೀಧರ ಪ್ರಾಥಮಿಕ ಶಿಕ್ಷಕರ ಸಂಘದ ಪದಾಧಿಕಾರಿಗಳನ್ನು ಗೌರವಿಸಲಾಯಿತು.

ಕುದರತ ಅಲಿ ಭೂಸನೂರ, ಬಿ.ವಿ ಹಿರೇಮಠ, ಶಿವಕುಮಾರ ಶಿವಸಿಂಪಿಗೇರ, ಸುರೇಶ ಪೂಜಾರ, ಶರಣು ಲಂಗೋಟಿ ಸೇರಿದಂತೆ 20 ಹೆಚ್ಚು ಕವಿಗಳು ತಮ್ಮ ಸ್ವ ರಚಿತ ಕವನಗಳನ್ನು ವಾಚಿಸಿದರು. ವೇದಿಕೆಯ ಮೇಲೆ ಶಿಕ್ಷಕಿ ಮೀನಾಕ್ಷಿ ವಾಘಮೋರೆ, ನಿವೃತ್ತ ಅಭಿಯಂತರ ತಾರಾನಾಥ ರಾಥೋಡ ಸೇರಿದಂತೆ ಹಲವರು ಉಪಸ್ಥಿತರಿದ್ದರು.

ರಾಗ ರಂಜನಿ ಸಂಸ್ಥೆ ಪ್ರಕಾಶ ಮೂಡಲಗಿ ಪ್ರಾರ್ಥಿಸಿದರು, ಶಿಕ್ಷಕ ಬಸವರಾಜ ಅಗಸರ ನಿರೂಪಿಸಿ ವಂದಿಸಿದರು.

### ಅ.18ರಂದು ಸಂಜೆ 4 ಗಂಟೆಗೆ ನಿಗದಿತ ಸ್ಥಳಗಳಿಂದ ಪ್ರಯಾಣ ಆರಂಭ

# ನಾಗಪುರದ ದೀಕ್ಷಾಭೂಮಿ ಯಾತ್ರೆಗೆ 8 ಬಸ್‌ಗಳ ವ್ಯವಸ್ಥೆ

■ ಉದಯರಶ್ಮಿ ದಿನಪತ್ರಿಕೆ

ವಿಜಯಪುರ: ಸಮಾಜ ಕಲ್ಯಾಣ ಇಲಾಖೆಯ 2026-27ನೇ ಸಾಲಿನ ಯೋಜನೆಯಡಿ ಡಾ. ಬಿ.ಆರ್. ಅಂಬೇಡ್ಕರ್ ಅವರ ಅನುಯಾಯಿಗಳು ನಾಗಪುರದ ದೀಕ್ಷಾಭೂಮಿಗೆ ಭೇಟಿ ನೀಡಲು ಅನುಕೂಲವಾಗುವಂತೆ ವಿಜಯಪುರ ಜಿಲ್ಲೆಯಿಂದ ಎಂಟು ರಾಜಹಂಸ ಕೆಎಸ್‌ಆರ್‌ಟಿಸಿ ಬಸ್‌ಗಳ ವ್ಯವಸ್ಥೆ ಕಲ್ಪಿಸಲಾಗಿದೆ.

ಪ್ರತಿ ವರ್ಷದಂತೆ ಅಕ್ಟೋಬರ್ 18ರಿಂದ 22ರವರೆಗೆ ನಾಗಪುರದ ದೀಕ್ಷಾಭೂಮಿಗೆ ಭೇಟಿ ನೀಡಲು ಇಚ್ಛಿಸುವವರಿಂದ ಇಲಾಖೆಯ ವೆಬ್‌ಸೈಟ್ ಮೂಲಕ ಆನ್‌ಲೈನ್ ಅರ್ಜಿಗಳನ್ನು ಆಹ್ವಾನಿಸಲಾಗಿ-ತ್ತು. ವಿಜಯಪುರ ಜಿಲ್ಲೆಯಿಂದ ಸ್ವೀಕೃತವಾದ 307 ಅರ್ಜಿಗಳನ್ನುಅನುಮೋದಿಸಲಾಗಿದೆ.ಅನುಮೋದಿತ ಅರ್ಜಿದಾರರು ಅಕ್ಟೋಬರ್ 18ರಂದು ಸಂಜೆ 4 ಗಂಟೆಗೆ ಆಯಾ ತಾಲೂಕುಗಳಿಗೆ ನಿಗದಿಪಡಿಸಿದ ಸ್ಥಳಗಳಲ್ಲಿ ಹಾಜರಿರಬೇಕು. ಪ್ರಯಾಣದ ವ್ಯವಸ್ಥೆಗಾಗಿ ಸಂಬಂಧಪಟ್ಟ ತಾಲೂಕುಗಳ ಸಮಾಜ ಕಲ್ಯಾಣ ಇಲಾಖೆಯ ಸಹಾಯಕ ನಿರ್ದೇಶಕರನ್ನು ಸಂಪರ್ಕಿಸುವಂತೆ ಸೂಚಿಸಲಾಗಿದೆ.ವಿಜಯಪುರ, ತಿಕೋಟಾ ಮತ್ತು ಬಬಲೇಶ್ವರ ತಾಲೂಕುಗಳ ಯಾತ್ರಿಕರು ವಿಜಯಪುರದ ಜಲನಗರದಲ್ಲಿರುವ ಬುದ್ಧವಿಹಾರದಲ್ಲಿ, ಇಂಡಿ, ಚಡಚಣ ತಾಲೂಕುಗಳ ಯಾತ್ರಿಕರು ಇಂಡಿಯ ಪ್ರವಾಸಿ ಮಂದಿರದಲ್ಲಿ; ಸಿಂದಗಿ ಹಾಗೂ ಆಲಮೇಲ ತಾಲೂಕಿನ ಯಾತ್ರಿಕರು ಸಿಂದಗಿಯ ಗಾಂಧಿ ವೃತ್ತದಲ್ಲಿರುವ ಸಮಾಜ ಕಲ್ಯಾಣ ಇಲಾಖೆಯ ಸಹಾಯಕ ನಿರ್ದೇಶಕರ ಕಚೇರಿಯಲ್ಲಿ ಹಾಜರಿರಬೇಕು.

ಬಸವನಬಾಗೇವಾಡಿ ಮತ್ತು ನಿಡಗುಂದಿ ತಾಲೂಕುಗಳ ಯಾತ್ರಿಕರು ಬಸವನಬಾಗೇವಾಡಿ ತಹಶೀಲ್ದಾರ್ ಕಚೇರಿಯಲ್ಲಿ, ಕೊಲ್ಹಾರ ತಾಲೂಕಿನ ಯಾತ್ರಿಕರು ಕೊಲ್ಹಾರ ತಹಶೀಲ್ದಾರ್ ಕಚೇ-ರಿಯಲ್ಲಿ, ಮುದ್ದೇಬಿಹಾಳ ತಾಲೂಕಿನ ಯಾತ್ರಿಕರು ಮುದ್ದೇಬಿಹಾಳ ತಹಶೀಲ್ದಾರ್ ಕಚೇರಿ, ತಾಳಿಕೋಟಿ ತಾಲೂಕಿನ ಯಾತ್ರಿಕರು ತಾಳಿಕೋಟಿ ಪ್ರವಾಸಿ ಮಂದಿರದಲ್ಲಿ ಹಾಗೂ ದೇವರ ಹಿಪ್ಪರಗಿ ಹಾಗೂ ಕಲಕೇರಿ ಯಾತ್ರಿಕರು ಕಲಕೇರಿ ಬಸ್ ನಿಲ್ದಾಣದಲ್ಲಿ ನಿಗದಿತ ಸಮಯಕ್ಕೆ ಹಾಜರಿರಬೇಕು.

ವಿಜಯಪುರ ತಾಲೂಕಿಗೆ ಸಂಬಂಧಿಸಿದ ಯಾತ್ರೆಗೆ ಜಲನಗರದ ಬುದ್ಧವಿಹಾರದಲ್ಲಿ ಚಾಲನೆ ನೀಡಲಾಗುವುದು. ಈ ಸಂದರ್ಭದಲ್ಲಿ ದಲಿತಪರ ಸಂಘಟನೆಗಳ ಪದಾಧಿಕಾರಿಗಳು, ವಿವಿಧ ಸಮಾಜದ ಮುಖಂಡರು ಹಾಗೂ ಸಾರ್ವಜನಿಕರು ಉಪ ಸ್ಥಿತರಿದ್ದು, ಯಾತ್ರಿಕರಿಗೆ ಶುಭ ಹಾರೈಸುವಂತೆ ಸಮಾಜ ಕಲ್ಯಾಣ ಇಲಾಖೆಯ ಪ್ರಕಟಣೆ ತಿಳಿಸಿದೆ.

# ಭರತ ನಾಟ್ಯ ಭಾರತೀಯ ಪರಂಪರೆ-ಸಂಸ್ಕೃತಿಯ ಪ್ರತಿಬಿಂಬ

■ ಉದಯರಶ್ಮಿ ದಿನಪತ್ರಿಕೆ

ಜಯಪುರ: ಭರತನಾಟ್ಯವು ಅತ್ಯಂತ ಪ್ರಾಚೀನ & ಸಾ0ಸ್ಕೃತಿ-ಕ ಕಲೆಯಾಗಿದೆ. ಈ ಕಲೆಯು ಜಗತ್ತಿನಲ್ಲಿ ಭಾರತದ ಪರಂಪರೆ ಮತ್ತು ಸಂಸ್ಕೃತಿಯನ್ನು ಎತ್ತಿ ಪಡೆಯುತಿದ್ದು, ಇದಕ್ಕೆ ಜಾಗತಿಕ ಮನ್ನಣೆ ದೊರೆತಿ-ರುವುದು ಹೆಮ್ಮೆಯ ವಿಷಯ ಎಂದು ಲಕ್ಷ್ಮಿ ದೇವಸ್ಥಾನದ ಅಧ್ಯಕ್ಷೆ ಶೋಭಾ ಚವ್ಹಾಣ ಅಭಿಪ್ರಾಯಪಟ್ಟರು. ಅವರು ನವರಾತ್ರಿ ಉತ್ಸವದ ಅಂಗವಾಗಿ ದೇವಸ್ಥಾನದಲ್ಲಿ ಜರುಗಿದ "ಸಾ0ಸ್ಕೃತಿಕ ಕಾರ್ಯಕ್ರಮ" ದಲ್ಲಿ ಮಾತನಾಡುತ್ತಿದ್ದರು.

ಪ್ರಾಚೀನ ಕಾಲದಲ್ಲಿ ಹಿಂದೂ ದೇವಾಲಯಗಳಲ್ಲಿ ಪ್ರದರ್ಶನಗೊಂಡು ಹಸ್ತ ಮುದ್ರೆಗಳು ಮತ್ತು ಮುಖ ಭಾವಗಳ ಮೂಲಕ ನಮ್ಮ ದೇಶೀಯ ಸಂಸ್ಕೃತಿ, ಪರಂಪರೆ & ಇತಿಹಾಸವನ್ನು ಅಭಿವ್ಯಕ್ತಗೊಳಿಸುತ್ತಿದೆ. ಆದ-ುನಿಕತೆಯ ಸೋಗಿನಲ್ಲಿ ಕಣ್ಮರೆಯಾಗುತ್ತಿರುವ ಭರತ ನಾಟ್ಯದ0ತಹ ಸಾ0ಸ್ಕೃತಿಕ ಕಲೆಗಳ ಬಗ್ಗೆ ನಮ್ಮ ಮುಂದಿನ ಜನಾಂಗಕ್ಕೆ ತಿಳಿಸಿಕೊಟ್ಟು ಉಳಿಸಿ ಬೆಳೆಸುವ ಕಾರ್ಯ ನಡೆಯಬೇಕಾಗಿದೆ ಎಂದರು.ಕಾರ್ಯಕ್ರಮದದಲ್ಲಿ ಗುರುಬಸಯ್ಯ ಹಿರೇಮಠ, ಬಿ.ಡಿ. ಕಡಕೋಳ, ವಿಠ್ಠಲ ಜಗತಾಪ, ರಾಜಶೇಖರ್ ಉಮಾರಾಣಿ,



ಪ್ರೊ. ಮಲ್ಲಪ್ಪ ಖೋದನಾಪುರ, ಬಾಬು ಮುಳವಾಡ, ರಾವಸಾಬ ಮೇಣಸಂಗೀ, ಹಡಪದ, ವಿಠ್ಠಲಗೌಡ ಕನಮಡಿ, ಸುನೀತಾ ಉಮಾರಾಣಿ, ರಮ್ಯ ಜಗತಾಪ ಇನ್ನಿತರರು ಉಪಸ್ಥಿತರಿದ್ದರು.

### ಕೇಂದ್ರ್ರದ ಸ್ಪಂದನೆಗೆ ಅಭಿನಂದನೆ । ರಾಜ್ಯ ಕಾಂಗ್ರೆಸ್ ಸರ್ಕಾರದ ನಿರ್ಲಕ್ಷ್ಯಕ್ಕೆ ಎಸ್.ಕೆ.ಬೆಳ್ಳುಬ್ಬಿ ಟೀಕೆ

# ಕಬ್ಬಿನ ಬೆಲೆ ಸಮಸ್ಯೆ ಪರಿಹಾರಕ್ಕೆ ಸಮಿತಿ ರಚನೆ ಸ್ವಾಗತಾರ್ಹ

■ ಉದಯರಶ್ಮಿ ದಿನಪತ್ರಿಕೆ




ಕೊಲ್ಹಾರ: ಕಬ್ಬು ಬೆಳೆಗಾರರ ಬೆಲೆ ಸಮಸ್ಯೆ ಪರಿಹಾರಕ್ಕೆ ಕೇಂದ್ರ ಸರ್ಕಾರ ಉನ್ನತ ಮಟ್ಟದ ಸಮಿತಿ ರಚಿಸಿರುವುದು ಸ್ವಾಗತಾರ್ಹ ಬೆಳವಣಿಗೆ. ರೈತರ ಹೋರಾಟಕ್ಕೆ ಸ್ಪಂದಿಸಿದ ಪ್ರಧಾನಿ ನರೇಂದ್ರ ಮೋದಿ ಹಾಗೂ ಕೇಂದ್ರ ಸಚಿವ ಪ್ರಲ್ಹಾದ ಜೋಶಿ ಅವರಿಗೆ ಅಭಿನಂದನೆ ಸಲ್ಲಿಸುವುದಾಗಿ ಮಾಜಿ ಸಚಿವ ಎಸ್.ಕೆ. ಬೆಳ್ಳುಬ್ಬಿ ಹೇಳಿದರು.

ಪಟ್ಟಣದ ತಮ್ಮ ಸ್ವಗೃಹದಲ್ಲಿ ಗುರುವಾರ ಸುದ್ದಿಗೋಷ್ಠಿ ನಡೆಸಿ ಮಾತನಾಡಿದ ಅವರು, ಕಬ್ಬಿಗೆ ನ್ಯಾಯಯುತ ಬೆಲೆ ನಿಗದಿಪಡಿಸುವಂತೆ ಆಗ್ರಹಿಸಿ ಕರ್ನಾಟಕ ರಾಜ್ಯ ರೈತ ಸಂಘ ಹಾಗೂ ಹಸಿರು ಸೇನೆ ನೇತೃತ್ವದಲ್ಲಿ ರೈತರು ಎರಡು ದಿನಗಳ ಕಾಲ ರಾಷ್ಟ್ರೀಯ ಹೆದ್ದಾರಿ ಬಂದ್ ನಡೆಸಿ ಸರ್ಕಾರದ ಗಮನ ಸೆಳೆದಿದ್ದಾರೆ. ರೈತರ ಬೇಡಿಕೆಗಳಿಗೆ ಕೇಂದ್ರ ಸರ್ಕಾರ ಸ್ಪಂದಿಸಿರುವುದು ಆಶಾದಾಯಕ ಬೆಳವಣಿಗೆ ಎಂದರು.

ಕಬ್ಬಿನ ಉತ್ಪಾದನಾ ವೆಚ್ಚ, ಕೂಲಿ ಕಾರ್ಮಿಕರ ಕೊರತೆ, ಸಾಗಣೆ ವೆಚ್ಚ ಹಾಗೂ ಕೃಷಿ ನಿರ್ವಹಣೆಯ ಖರ್ಚು ಹೆಚ್ಚಾಗುತ್ತಿರುವುದರಿಂದ ಬೆಳೆಗಾರರು ಸಂಕಷ್ಟ ಎದು-ರಿಸುತ್ತಿದ್ದಾರೆ. ಈ ಹಿನ್ನೆಲೆಯಲ್ಲಿ ಪ್ರತಿ ಟನ್ ಕಬ್ಬಿಗೆ □5,500 ದರ ನಿಗದಿಪಡಿಸಬೇಕು. ಬೆಲೆ ನಿಗದಿಗೆ ಪಾರದರ್ಶಕ ವ್ಯವಸ್ಥೆ ರೂಪಿಸಿ ರೈತರಿಗೆ ಆರ್ಥಿಕ ಭದ್ರತೆ ಒದಗಿಸಬೇಕು ಎಂಬುದು ಪ್ರಮುಖ ಬೇಡಿಕೆಯಾಗಿದೆ ಎಂದು ತಿಳಿಸಿದರು.

ಅ.12ರಂದು ನವದೆಹಲಿಯಲ್ಲಿ ಕೇಂದ್ರ ಸಚಿವರೊಂದಿಗೆ ನಡೆದ ಸಭೆಯಲ್ಲಿ ಕಬ್ಬಿನ ಬೆಲೆ, ಕನಿಷ್ಠ ಬೆಂಬಲ ಬೆಲೆ ನಿಗದಿ ಪ್ರಕ್ರಿಯೆ, ಎಥನಾಲ್ ಖರೀದಿ ಹಾಗೂ ಮಾರುಕಟ್ಟೆ ವ್ಯವಸ್ಥೆ ಕುರಿತು ಚರ್ಚೆ ನಡೆದಿದೆ. ಸಮಸ್ಯೆಗಳ ಅಧ್ಯಯನಕ್ಕಾಗಿ ಸಮಿತಿ ರಚಿಸಿರುವುದು ರೈತರ ಹೋರಾಟಕ್ಕೆ ದೊರೆತ ಪ್ರಾಥಮಿಕ ಯಶಸ್ಸಾಗಿದೆ ಎಂದು ಅಭಿಪ್ರಾಯಪಟ್ಟರು.

ಸಮಿತಿಯು ರೈತ ಸಂಘಟನೆಗಳು ಮತ್ತು ಸಕ್ಕರೆ ಕಾರ್ಖಾನೆಗಳ ಪ್ರತಿನಿಧಿಗಳ ಅಭಿಪ್ರಾಯಗಳನ್ನು ಆಲಿಸಿ, ರೈತರಿಗೆ ನ್ಯಾಯ ದೊರಕಿಸುವ ಶಿಫಾರಸುಗಳನ್ನು ಸಲ್ಲಿಸಬೇಕು. ಎಥನಾಲ್ ಉತ್ಪಾದನೆ ಮತ್ತು ಖರೀದಿ ವ್ಯವಸ್ಥೆಯಲ್ಲಿಯೂ ಬೆಳೆಗಾರರಿಗೆ ಅನುಕೂಲವಾಗುವ ನೀತಿ ರೂಪಿಸಬೇಕು ಎಂದು ಒತ್ತಾಯಿಸಿದರು.

ಎರಡು ದಿನಗಳ ಹೆದ್ದಾರಿ ಬಂದ್ ಸಂದರ್ಭದಲ್ಲಿ ಯಾವುದೇ ಅಹಿತಕರ ಘಟನೆಗಳಿಗೆ ಅವಕಾಶ ನೀಡದೆ ಶಾಂತಿಯುತವಾಗಿ ಹೋರಾಟ ನಡೆಸಿರುವ ರೈತರ ಸಂಯಮ ಶ್ಲಾಘನೀಯ. ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಶಾಂತಿಯುತ ಪ್ರತಿಭಟನೆ ರೈತರ ಹಕ್ಕಾಗಿದ್ದು, ಅವರ ಹೋರಾಟದ ಆಶಯವನ್ನು ಸರ್ಕಾರಗಳು ಗೌರವಿಸಬೇಕು ಎಂದರು.

ಕೇಂದ್ರ ಸರ್ಕಾರ ಸಮಿತಿ ರಚಿಸಿ ಪರಿಹಾರದ ಪ್ರಕ್ರಿಯೆಗೆ ಮುಂದಾಗಿರುವುದರಿಂದ ರೈತ ಸಂಘಟನೆಗಳು ಮಾತುಕತೆಗೆ ಅವಕಾಶ ನೀಡಬೇಕು. ಸರ್ಕಾರಕ್ಕೆ ಅಗತ್ಯ ಕಾಲಾವಕಾಶ ನೀಡಿ, ಸಮಾಲೋಚನೆಗಳ ಮೂಲಕ ಬೇಡಿಕೆಗಳ ಈಡೇರಿಕೆಗೆ ಪ್ರಯತ್ನಿಸಬೇಕು. ರೈತರ ಹಿತ ಕಾಪಾಡುವ ನಿಟ್ಟಿನಲ್ಲಿ ಕೇಂದ್ರ ಸರ್ಕಾರ ಸಕಾರಾತ್ಮಕ ನಿರ್ಧಾರ ಕೈಗೊಳ್ಳಲಿದೆ ಎಂಬ ವಿಶ್ವಾಸವಿದೆ ಎಂದು ಹೇಳಿದರು.

ರಾಜ್ಯ ಸರ್ಕಾರದ ವಿರುದ್ಧ ವಾಗ್ದಾಳಿ

ಕಬ್ಬಿನಬೆಲೆಸಮಸ್ಯೆಗೆಸಂಬಂಧಿಸಿದಂತೆರಾಜ್ಯಕಾಂಗ್ರೆಸ್ ಸರ್ಕಾರದ ವಿರುದ್ಧವೂ ಅಸಮಾಧಾನ ವ್ಯಕ್ತಪಡಿಸಿದ ಬೆಳ್ಳುಬ್ಬಿ, ರೈತರು ನಿರಂತರ ಹೋರಾಟ ನಡೆಸುತ್ತಿದ್ದರೂ ಅವರಿಗೆ ನ್ಯಾಯಯುತ ಬೆಲೆ ದೊರಕಿಸಿಕೊಡುವ ನಿಟ್ಟಿನಲ್ಲಿ ರಾಜ್ಯ ಸರ್ಕಾರ ಪರಿಣಾಮಕಾರಿ ಕ್ರಮ ಕೈಗೊಂಡಿಲ್ಲ ಎಂದು ಆರೋಪಿಸಿದರು.

ರೈತರ ಸಂಕಷ್ಟವನ್ನು ನಿರ್ಲಕ್ಷಿಸುವುದು ಖಂಡನೀಯ. ಕೇಂದ್ರ ಸರ್ಕಾರ ಸಮಿತಿ ರಚಿಸಿ ಸಮಸ್ಯೆ ಪರಿಹಾರಕ್ಕೆ ಮುಂದಾಗಿರುವಾಗ ರಾಜ್ಯ ಸರ್ಕಾರವೂ ತನ್ನ ಜವಾಬ್ದಾರಿ ಅರಿತು ಕಬ್ಬಿಗೆ ಸೂಕ್ತ ಬೆಲೆ ದೊರಕಿಸಲು ಕ್ರಮ ಕೈಗೊಳ್ಳಬೇಕು. ರೈತರ ಸಮಸ್ಯೆಯನ್ನು ರಾಜಕೀಯ ದೃಷ್ಟಿಯಿಂದ ನೋಡುವ ಬದಲು ಅವರ ಹಿತಾಸಕ್ತಿಗೆ ಆದ್ಯತೆ ನೀಡಬೇಕು ಎಂದು ಒತ್ತಾಯಿಸಿದರು.

ಕಬ್ಬು ಬೆಳೆಗಾರರ ಬೇಡಿಕೆಗಳಿಗೆ ಸ್ಪಂದಿಸಿ ಸಮಿತಿ ರಚಿಸಿರುವ ಪ್ರಧಾನಿ ನರೇಂದ್ರ ಮೋದಿ, ಕೇಂದ್ರ ಸಚಿವ ಪ್ರಲ್ಹಾದ ಜೋಶಿ ಹಾಗೂ ಸಂಬಂಧಪಟ್ಟ ಸಚಿವರಿಗೆ ಅವರು ಕೃತಜ್ಞತೆ ಸಲ್ಲಿಸಿದರು.

ಈ ಸಂದರ್ಭದಲ್ಲಿ ಚಿನ್ನಪ್ಪ ಗಿಡ್ಡಪ್ಪಗೋಳ, ಮಲ್ಲಪ್ಪ ಗಣಿ, ಪರಮಪ್ಪ ಬರಗಿ, ಅಶೋಕ ಗಿಡ್ಡಪ್ಪಗೋಳ ಸೇರಿದಂತೆ ರೈತ ಮುಖಂಡರು ಇದ್ದರು.

### ಕೃಷ್ಣೆಗೆ ನೀರು ಬಂದ ತಕ್ಷಣ ಕಾಲುವೆಗಳಿಗೆ ಹರಿಸಿ । ವಿಜಯಪುರ ಬಾಗಲಕೋಟೆ ರೈತರ ಹಿತಕ್ಕೆ ಆದ್ಯತೆ ನೀಡಲು ಬೆಳ್ಳುಬ್ಬಿ ಆಗ್ರಹ

# ಲಿಫ್ಟ್ ಇರಿಗೇಷನ್ ಪಂಪ್‌ಗಳನ್ನು ಐಸಿಸಿ ವ್ಯಾಪ್ತಿಯಿಂದ ಹೊರಗಿಡಿ

■ ಉದಯರಶ್ಮಿ ದಿನಪತ್ರಿಕೆ

ಕೊಲ್ಹಾರ: ಆಲಮಟ್ಟಿ ಜಲಾಶಯ ನಿರ್ಮಾಣಕ್ಕಾಗಿ ಭೂಮಿ, ಮನೆ ಹಾಗೂ ಬದುಕನ್ನೇ ತ್ಯಾಗ ಮಾಡಿರುವ ವಿಜಯಪುರ ಮತ್ತು ಬಾಗಲಕೋಟೆ ಅವಳಿ ಜಿಲ್ಲೆಯ ರೈತರ ಹಿತದೃಷ್ಟಿಯಿಂದ ಅವಳಿ ಜಿಲ್ಲೆಯ ಲಿಫ್ಟ್ ಇರಿಗೇಷನ್ ಯೋಜನೆಗಳನ್ನು ನೀರಾವರಿ ಸಲಹಾ ಸಮಿತಿ (ಐಸಿಸಿ) ವ್ಯಾಪ್ತಿಯಿಂದ ಹೊರಗಿಡಬೇಕು. ಕೃಷ್ಣಾ ನದಿಗೆ ನೀರು ಬಂದ ತಕ್ಷಣ ಕಾಲುವೆಗಳಿಗೆ ಹರಿಸುವ ವ್ಯವಸ್ಥೆ ಕಲ್ಪಿಸಬೇಕು ಎಂದು ಮಾಜಿ ಸಚಿವ ಎಸ್. ಕೆ. ಬೆಳ್ಳುಬ್ಬಿ ಸರ್ಕಾರವನ್ನು ಒತ್ತಾಯಿಸಿದರು.

ಪಟ್ಟಣದ ತಮ್ಮ ಸ್ವಗೃಹದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಮಳೆ ಕೊರತೆ ಹಾಗೂ ನೀರಿನ ಅಭಾವದಿಂದ ಅವಳಿ ಜಿಲ್ಲೆಯ ರೈತರು ಸಂಕಷ್ಟ ಎದುರಿಸುತ್ತಿದ್ದಾರೆ. ಜುಲೈ 15ರಂದು ಲಿಫ್ಟ್ ಇರಿಗೇಷನ್ ಪಂಪ್‌ಗಳನ್ನು ಚಾಲನೆಗೊಳಿಸುವಂತೆ ಒತ್ತಾಯಿಸಿ ಕಾಲುವೆಗಳಿಗೆ ನೀರು ಹರಿಸಲಾಗಿ-ತ್ತು. ಅಕ್ಟೋಬರ್ 15ಕ್ಕೆ ಮೂರು ತಿಂಗಳು ಕಳೆದಿದ್ದು, ಈ ಭಾಗದ ರೈತರು ನೀರಾವ-ರಿಗಾಗಿ ಸಾಕಷ್ಟು ಹಣ ವ್ಯಯಿಸಿದ್ದಾರೆ. ಇಂತಹ ಸಂದರ್ಭದಲ್ಲಿ ನೀರು ಪೂರೈಕೆಗೆ ಅಡ್ಡಿಯಾಗುವ ನಿರ್ಧಾರಗಳು ರೈತರನ್ನು ಮತ್ತಷ್ಟು ಸಂಕಷ್ಟಕ್ಕೆ ದೂಡಲಿವೆ ಎಂದು ಆತಂಕ ವ್ಯಕ್ತಪಡಿಸಿದರು.

ರೈತರ ಹೂಡಿಕೆ ವ್ಯರ್ಥವಾಗದಿರಲಿ

ಕಾಲುವೆಗಳಿಂದ ನೀರು ಎತ್ತಲು ರೈತರು ಲಕ್ಷಾಂತರ ರೂಪಾಯಿ ವೆಚ್ಚದಲ್ಲಿ ಪಂಪ್‌ಸೆಟ್‌ಗಳನ್ನು ಅಳವಡಿಸಿಕೊಂಡಿದ್ದಾರೆ. ಅವುಗಳ ನಿರ್ವಹಣೆಗೂ ಹಣ ಖರ್ಚು ಮಾಡಿದ್ದಾರೆ. ಈಗ ಪಂಪ್‌ಗಳನ್ನು ತೆರವುಗೊಳಿಸುವ ಅಥವಾ ಕಾರ್ಯಾಚರಣೆಗೆ ಅಡ್ಡಿಪಡಿಸುವ ಕ್ರಮ ಕೈಗೊಂಡರೆ ರೈತರ ಹೂಡಿಕೆ ಮಾತ್ರವಲ್ಲ, ಕೈಗೆ ಬಂದಿರುವ ಬೆಳೆಗಳೂ ಅಪಾಯಕ್ಕೆ ಸಿಲುಕಲಿವೆ. ಹೀಗಾಗಿ ರೈತರ ಹಿತವನ್ನು ಗಮನದಲ್ಲಿಟ್ಟುಕೊಂಡು ನೀರಾವರಿ ನೀತಿ ರೂಪಿಸಬೇಕು ಎಂದು ಆಗ್ರಹಿಸಿದರು.

ಆಲಮಟ್ಟಿ ಜಲಾಶಯದ ನೀರಿನ ಸಂಗ್ರಹ, ಕೃಷ್ಣಾ ನದಿಯ ಹರಿವು ಹಾಗೂ ಆಂಧ್ರಪ್ರದೇಶಕ್ಕೆ ನೀರು ಬಿಡುಗಡೆ ಮಾಡುವ ವಿಚಾರಗಳು ರೈತರಲ್ಲಿ ಆತಂಕ ಮೂಡಿಸಿವೆ. ಲಭ್ಯವಿರುವ ನೀರಿನ ಪ್ರಮಾಣ ವನ್ನು ವೈಜ್ಞಾನಿಕವಾಗಿ ಲೆಕ್ಕಹಾಕಿ, ಸ್ಥಳೀಯ ರೈತರ ಬೆಳೆಗಳಿಗೆ ಅಗತ್ಯವಿರುವ ನೀರು ಒದಗಿಸಲುಆದ್ಯತೆ ನೀಡಬೇಕು. ನೀರಿನ ನಿರ್ವ ಹಣೆಯಲ್ಲಿ ತಾರತಮ್ಯವಿಲ್ಲದೆ, ಬೆಳೆಗಳನ್ನು ಉಳಿಸುವ ನಿಟ್ಟಿನಲ್ಲಿ ತುರ್ತು ಕ್ರಮ ಕೈಗೊಳ್ಳಬೇಕು ಎಂದು ಹೇಳಿದರು.



ತ್ಯಾಗ ಮಾಡಿದ ರೈತರಿಗೆ ನೀರಾವರಿ ಸೌಲಭ್ಯ ಸಿಗಲಿ ಆಲಮಟ್ಟಿ ಜಲಾಶಯಕ್ಕಾಗಿ ಸರ್ವಸ್ವವನ್ನೂ ತ್ಯಾಗ ಮಾಡಿದ ಜನರಿಗೆ ಸಮರ್ಪಕ ನೀರಾವರಿ ಸೌಲಭ್ಯ ಕಲ್ಪಿಸುವುದು ಸರ್ಕಾರದ ಹೊಣೆಗಾರಿಕೆ. ಹೀಗಾಗಿ ವಿಜಯಪುರ ಬಾಗಲಕೋಟೆ ಜಿಲ್ಲೆಗಳ ಲಿಫ್ಟ್ ಇರಿಗೇಷನ್ ಯೋಜನೆಗಳಿಗೆ ಐಸಿಸಿ ವ್ಯಾಪ್ತಿಯ ನಿರ್ಬಂಧಗಳಿಂದ ವಿನಾಯಿತಿ ನೀಡಿ, ಕೃಷ್ಣಾ ನದಿಯಲ್ಲಿ ನೀರು ಲಭ್ಯವಾದ ತಕ್ಷಣ ಕಾಲುವೆಗಳಿಗೆ ಹರಿಸುವ ಶಾಶ್ವತ ವ್ಯವಸ್ಥೆ ರೂಪಿಸಬೇಕು ಎಂದು ಒತ್ತಾಯಿಸಿದರು.

ಜಿಲ್ಲೆಯ ನೀರಾವರಿ ಸಮಸ್ಯೆಗಳಿಗೆ ತ್ವರಿತವಾಗಿ ಸ್ಪಂದಿಸುತ್ತಿರುವ ಜಿಲ್ಲಾಧಿಕಾರಿ ಕೆ. ಆನಂದ್ ಹಾಗೂ ವಿಭಾಗೀಯ ಆಯುಕ್ತೆ ಜಾನಕಿ ಅವರ ಕಾರ್ಯ ವೈಖರಿಯನ್ನು ಶ್ಲಾಘಿಸಿದ ಬೆಳ್ಳುಬ್ಬಿ, ಅಧಿಕಾರಿಗಳ ಇದೇ ರೀತಿಯ ಸ್ಪಂದನೆ ಸರ್ಕಾರದ ಮಟ್ಟದಲ್ಲಿಯೂ ವ್ಯಕ್ತವಾಗಬೇಕು ಎಂದು ಹೇಳಿದರು.

# ಪ್ರಜಾಸೇವಾ ಅಭಿಯಾನಕ್ಕೆ ಶಾಸಕ ವಿಠ್ಠಲ ಕಟಕಧೋಂಡ ಚಾಲನೆ



■ ಉದಯರಶ್ಮಿ ದಿನಪತ್ರಿಕೆ

ಚಡಚಣ: ಸರ್ಕಾರದ ಯೋಜನೆಗಳನ್ನು ಅರ್ಹ ಫಲಾನುಭವಿಗಳಿಗೆ ತಲುಪಿಸುವುದು ಹಾಗೂ ಸಾರ್ವಜನಿಕರ ಸಮಸ್ಯೆಗಳಿಗೆ ತ್ವರಿತವಾಗಿ ಸ್ಪಂದಿಸುವುದುಅಧಿಕಾರಿಗಳಕರ್ತವ್ಯವಾಗಿದೆ.ಕರ್ತವ್ಯ ನಿರ್ವಹಣೆಯಲ್ಲಿ ನಿರ್ಲಕ್ಷ್ಯ ತೋರುವ ಅಧಿಕಾರಿಗಳ ವಿರುದ್ಧ ಕಠಿಣ ಕ್ರಮ ಕೈಗೊಳ್ಳಲಾಗುವುದು ಎಂದು ನಾಗಠಾಣ ಶಾಸಕ ವಿಠ್ಠಲ ಕಟಕಧೋಂಡ ಎಚ್ಚರಿಕೆ ನೀಡಿದರು.

## ಜನರ ಅಹವಾಲು ಆಲಿಸಲು ಸೂಕ್ತ ವ್ಯವಸ್ಥೆಯೇ ಇರಲಿಲ್ಲ!

'ಮನೆ ಬಾಗಿಲಿಗೆ ಬಂತು ಸರ್ಕಾರ, ಸಹಕಾರ ಇರಲಿ' ಎಂಬ ಧ್ಯೇಯದೊಂದಿಗೆ ಆಯೋಜಿಸಿರುವ ಪ್ರಜಾ ಸೇವಾ ಅಭಿಯಾನದ ಉದ್ದೇಶವೇಸಾರ್ವಜನಿಕರಕುಂದುಕೊರತೆಗಳನ್ನು ಆಲಿಸಿ, ಪರಿಹಾರ ಒದಗಿಸುವುದಾಗಿದೆ. ಆದ–'ರೆ ಬರಡೋಲದಲ್ಲಿ ನಡೆದ ಕಾರ್ಯಕ್ರಮದ ವ್ಯವಸ್ಥೆ ಬಗ್ಗೆ ಸ್ಥಳೀಯರು ತೀವ್ರ ಅಸಮಾಧಾನ ವ್ಯಕ್ತಪಡಿಸಿದರು.

ಕಾರ್ಯಕ್ರಮದ ಕುರಿತು ಪೂರ್ವಭಾವಿ ಮಾಹಿತಿ ಸಮರ್ಪಕವಾಗಿ ನೀಡಿರಲಿಲ್ಲ. ಸೂಕ್ತ ಸ್ಥಳದಲ್ಲಿ ಸಭೆ ಆಯೋಜಿಸದಿರುವುದು, ಕಳಪೆ ಧ್ವನಿವರ್ಧಕ ವ್ಯವಸ್ಥೆಯಿಂದಾಗಿ ಸಾರ್ವಜನಿಕರ ಅಹವಾಲುಗಳು ಅಧಿಕಾರಿಗಳಿಗೆ ಕೇಳಿಸದಿರುವುದು ಹಾಗೂ ಅಧಿಕಾರಿಗಳ ಉತ್ತರಗಳು ಜನರಿಗೆ ತಲುಪದಿರುವುದು ಗೊಂದಲಕ್ಕೆ ಕಾರಣವಾಯಿತು. ಸಭೆಯಲ್ಲಿ ತಮ್ಮ ಸಮಸ್ಯೆಗಳನ್ನು ಹೇಳಿಕೊಳ್ಳಲು ಸೂಕ್ತ ಅವಕಾಶವೇ ಸಿಗಲಿಲ್ಲ ಎಂದು ಸ್ಥಳೀಯರು ಆಕ್ರೋಶ ವ್ಯಕ್ತಪಡಿಸಿದರು.

ಕಾರ್ಯಕ್ರಮವನ್ನು ಮತ್ತೊಮ್ಮೆ ವ್ಯವಸ್ಥಿತವಾಗಿ ಆಯೋಜಿಸಬೇಕೆಂದು ಸಾರ್ವಜನಿಕರು ಪಟ್ಟು ಹಿಡಿದ ಹಿನ್ನೆಲೆಯಲ್ಲಿ ಶಾಸಕ ವಿಠ್ಠಲ ಕಟಕಧೋಂಡ ಅವರು ಅಕ್ಟೋಬರ್ 24ರಂದು ಬರಡೋಲ ಗ್ರಾಮದಲ್ಲೇ ಪ್ರಜಾ ಸೇವಾ ಅಭಿಯಾನವನ್ನು ಪುನಃ ಆಯೋಜಿಸಲಾಗುವುದು ಎಂದು ಘೋಷಿಸಿದರು.

## ಬರಡೋಲದಲ್ಲಿ ಪ್ರಜಾ ಸೇವಾ ಅಭಿಯಾನಕ್ಕೆ ಅವ್ಯವಸ್ಥೆಯ ಅಡ್ಡಿ । ಜನರ ಅಹವಾಲು ಕೇಳಲು ವ್ಯವಸ್ಥೆಯೇ ಇಲ್ಲ । ಕೇವಲ 51 ಅಹವಾಲು ಸ್ವೀಕಾರ

ತಾಲೂಕಿನ ಬರಡೋಲ ಗ್ರಾಮದಲ್ಲಿ ಆಯೋಜಿಸಿದ್ದ 'ಪ್ರಜಾ ಸೇವಾ ಅಭಿಯಾನ'ದ ಜನಸಭೆಯಲ್ಲಿ ಮಾತನಾಡಿದ ಅವರು, ಸರ್ಕಾರದ ಯೋಜನೆಗಳು ಅರ್ಹರಿಗೆ ತಲುಪಬೇಕು. ವಿವಿಧ ಇಲಾಖೆಗಳ ಅಧಿಕಾರಿಗಳು ಜನರ ಸಮಸ್ಯೆಗಳನ್ನು ಗಂಭೀರವಾಗಿ ಪರಿಗಣಿಸಿ, ಅವುಗಳ ಪರಿಹಾರಕ್ಕೆ ಪ್ರಾಮಾಣಿಕವಾಗಿ ಪ್ರಯತ್ನಿಸಬೇಕು ಎಂದು ಸೂಚಿಸಿದರು.

ಮುಂದಿನ 2027ರ ಆಗಸ್ಟ್ ವರೆಗೆ ಮಳೆಯ ಕೊರತೆ ಎದುರಾಗುವ ಸಾಧ್ಯತೆಯಿದೆ ಎಂದು ವಿಜ್ಞಾನಿಗಳು ಹೇಳಿರುವ ಹಿನ್ನೆಲೆಯಲ್ಲಿ ನೀರಿನ ಅಭಾವ ಉಂಟಾಗದಂತೆ ಅಧಿಕಾರಿಗಳು ಮುನ್ನೆಚ್ಚರಿಕೆ ವಹಿಸಬೇಕು. ಯಾವುದೇ ಗ್ರಾಮದಲ್ಲಿ ಕುಡಿಯುವ ನೀರಿನ ಸಮಸ್ಯೆ ತಲೆದೋರದಂತೆ ಅಗತ್ಯವಿರುವ ಕಡೆ ಪರ್ಯಾಯ ವ್ಯವಸ್ಥೆ ಕಲ್ಪಿಸಬೇಕು ಎಂದು ಸೂಚಿಸಿದರು. ಇ ಸ್ವತ್ತಿನ ಉತಾರಿಗಳ ಕುರಿತು ಪಿಡಿಓ ಅವರಿಂದ ಲಿಖಿತ ಮಾಹಿತಿ ಪಡೆಯಿರಿ ಕೆಲಸ ಮಾಡದ ಪಿಡಿಓ ಅಧಿಕಾರಿಗಳನ್ನು ಕೆಲಸದಿಂದಲೆ ತೆಗೆದುಹಾಕುತ್ತೆನೆ ಎಂದು ವಿಠ್ಠಲ ಕಟಕಧೋಂಡವರು ನಿರ್ಲಕ್ಷ ತೋರುವ ಅಧಿಕಾರಿಗಳಿಗೆ ಕಡಕ್ ಎಚ್ಚರಿಕೆ ನೀಡಿದರು.

ಕಾರ್ಯಕ್ರಮದಲ್ಲಿ ಗ್ಯಾರಂಟಿ ಯೋಜನೆಗಳ ಅಧ್ಯಕ್ಷ ರವಿದಾಸ ಜಾಧವ, ತಹಶೀಲದಾರ ಸಂಜಯ ಇಂಗಳೆ,ತಾಲೂಕು ಪಂಚಾಯಿತಿ ಕಾರ್ಯನಿರ್ವಾಹಕ ಅಧಿಕಾರಿ ಅಶೋಕಕುಮಾರ ರಾಠೋಡ, ದಾನಮ್ಮಗೌಡತಿ ಪಾಟೀಲ, ಬರಡೋಲ ಗ್ರಾ.ಪಂ.ಸದಸ್ಯರು ಸೇರಿದಂತೆ ವಿವಿಧ ಇಲಾಖೆಗಳ ಅಧಿಕಾರಿಗಳು ಹಾಗೂ ಸಾರ್ವಜನಿಕರು ಉಪಸ್ಥಿತ–ರಿದ್ದರು.

# ಸಹಕಾರಿ ಕ್ಷೇತ್ರದ ಶ್ರೇಯೋಭಿವೃದ್ಧಿಗೆ ಕೈಜೋಡಿಸಿ :ದರ್ಶನಾಪುರ

■ ಉದಯರಶ್ಮಿ ದಿನಪತ್ರಿಕೆ



ಕೆಂಭಾವಿ: ಜಿಲ್ಲೆಯಾದ್ಯಂತ ಸಹಕಾರಿ ಕ್ಷೇತ್ರವು ಪ್ರಗತಿಯ ಹಾದಿಯಲ್ಲಿ ಸಾಗುತ್ತಿರುವುದು ಸಂತೋಷದ ಸಂಗತಿಯಾಗಿದೆ. ಸುರಪುರ ಹಾಗೂ ಹುಣಸಗಿ ತಾಲೂಕಿನ ನೀರು ಬಳಕೆದಾರರ ಸಹಕಾರ ಸಂಘಗಳ ಪದಾಧಿಕಾ–ರಿಗಳು ಹಾಗೂ ಸಿಬ್ಬಂದಿ ಇಂತಹ ತರಬೇತಿ ಶಿಬಿರಗಳ ಸದುಪಯೋಗ ಪಡೆದುಕೊಳ್ಳಬೇಕು ಎಂದು ರಾಜ್ಯ ಸಹಕಾರ ಮಹಾಮಂಡಳದ ನಿರ್ದೇಶಕ ವಿಶ್ವನಾಥರಡ್ಡಿ ದರ್ಶನಾಪುರ ಹೇಳಿದರು.

ಪಟ್ಟಣದ ಶ್ರೀ ಹೇಮರೆಡ್ಡಿ ಮಲ್ಲಮ್ಮ ಕಲ್ಯಾಣ ಮಂಟಪದಲ್ಲಿ, ಕರ್ನಾಟಕ ರಾಜ್ಯ ಸಹಕಾರ ಮಹಾಮಂಡಳಿ ಬೆಂಗಳೂರು, ಯಾದಗಿರಿ ಜಿಲ್ಲಾ ಸಹಕಾರ ಒಕ್ಕೂಟ, ಸಹಕಾರ ಇಲಾಖೆ ಯಾದಗಿರಿ ಹಾಗೂ ಕೃಷ್ಣಾ ಕಾಡಾ (ಸಹಕಾರ ವಿಭಾಗ) ಭೀಮರಾಯನಗುಡಿ ಇವುಗಳ ಸಂಯುಕ್ತಾಶ್ರಯದಲ್ಲಿ ಸುರಪುರ ಮತ್ತು ಹುಣಸಗಿ ತಾಲೂಕುಗಳ ವ್ಯಾಪ್ತಿಯ ನೀರು ಬಳಕೆದಾರರ ಸಹಕಾರ ಸಂಘಗಳ ಅಧ್ಯಕ್ಷರು ಹಾಗೂ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳಿಗೆ ಶನಿವಾರ ಹಮ್ಮಿಕೊಂಡ ವಿಶೇಷ ತರಬೇತಿ ಶಿಬಿರದ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಸುರಪುರ ಮತ್ತು ಹುಣಸಗಿ ವ್ಯಾಪ್ತಿಯಲ್ಲಿ ಸುಮಾರು 250ಕ್ಕೂ ಹೆಚ್ಚು ನೀರು ಬಳಕೆದಾರರ ಸಹಕಾರ ಸಂಘಗಳಿದ್ದವು, ಅವುಗಳಲ್ಲಿ ಬೆರಳೆಣಿಕೆಯಷ್ಟು ಮಾತ್ರ ಸಕ್ರಿಯವಾಗಿವೆ. ಮುಂಬರುವ ದಿನಗಳಲ್ಲಿ ಹೊಸ ನೀರು ಬಳಕೆದಾರರ ಸಂಘಗಳ ರಚನೆಗೆ ಹೆಚ್ಚು ಒತ್ತು ನೀಡುವ ಮೂಲಕ ಸಹಕಾರಿ ಕ್ಷೇತ್ರದ ಶ್ರೇಯೋಭಿವೃದ್ಧಿಗೆ ಎಲ್ಲರೂ ಕೈಜೋಡಿಸಬೇಕು ಎಂದು ಅವರು ಕರೆ ನೀಡಿದರು.

> "ಯಾದಗಿರಿ ಜಿಲ್ಲೆಗೆ ಶೀಘ್ರದಲ್ಲೇ ಪ್ರತ್ಯೇಕ ಜಿಲ್ಲಾ ಸಹಕಾರ (ಡಿಸಿಸಿ) ಬ್ಯಾಂಕ್ ಮಂಜೂರಾಗಲಿದ್ದು, ಕೆಂಭಾವಿ, ಹುಣಸಗಿ, ಸೈದಾಪುರ ಹಾಗೂ ಗುರುಮಠಕಲ್‌ನಲ್ಲಿ ಡಿಸಿಸಿ ಬ್ಯಾಂಕಿನ ಉಪ ಶಾಖೆಗಳು ಆರಂಭವಾಗಲಿವೆ. ಯಾದಗಿರಿ ಹಿಂದುಳಿದ ಜಿಲ್ಲೆಯಾಗಿರುವುದರಿಂದ ಶೇರು ಬಂಡವಾಳವಾಗಿ 50 ಕೋಟಿ ರೂಪಾಯಿ ಧನಸಹಾಯ ನೀಡುವಂತೆ ಕೇಂದ್ರ ಸರ್ಕಾರಕ್ಕೆ ಕೋರಲಾಗಿದೆ."
> ■ ಸುರೇಶ ಆರ್. ಸಜ್ಜನ
> ನಿರ್ದೇಶಕರು, ಕೆವೈಡಿಸಿಸಿ ಬ್ಯಾಂಕ್

ಕಾರ್ಯಕ್ರಮದಲ್ಲಿ ಉಪನ್ಯಾಸ ನೀಡಿದ ರಾಮಚಂದ್ರ ಹಾಗೂ ಶಂಕರ ಅವರು ಸಹಕಾರ ಕ್ಷೇತ್ರದಲ್ಲಿ ಸುಮಾರು 150ಕ್ಕೂ ಹೆಚ್ಚು ವಿಧದ ಸಂಘಗಳ ನೊಂದಣಿಗೆ ಅವಕಾಶವಿದ್ದು ಸರ್ಕಾರದಿಂದ ಸಿಗುವ ಸೌಲಭ್ಯಗಳನ್ನು ಸದುಪಯೋಗಪಡಿಸಿಕೊಳ್ಳಬೇಕು ಎಂದರು.

ಕೆವೈಡಿಸಿಸಿ ಬ್ಯಾಂಕ್ ನಿರ್ದೇಶಕ ಬಸವರಾಜ ಪಾಟೀಲ ಚಿಂಚೋಳಿ ಕಾರ್ಯಕ್ರಮ ಉದ್ಘಾಟಿಸಿದರು. ಮಾಜಿ ನಿರ್ದೇಶಕ ಬಾಪುಗೌಡ ಪಾಟೀಲ್ ಹುಣಸಗಿ ಪ್ರಾಸ್ತಾವಿಕವಾಗಿ ಮಾತನಾಡಿದರು.

ಕೃಷ್ಣಾ ಕಾಡಾ ಭೂ ಅಭಿವೃದ್ಧಿ ಅಧಿಕಾರಿ ಸರಸ್ವತಿ ಎನ್., ಸಹಕಾರಿ ಒಕ್ಕೂಟದ ಉಪಾಧ್ಯಕ್ಷ ಎಂ. ನಾರಾಯಣ ಹಾಗೂ ಪಿಎಲ್‌ಡಿ ಬ್ಯಾಂಕ್ ನಿರ್ದೇಶಕ ವಾಮನರಾವ್ ದೇಶಪಾಂಡೆ ಮಾತನಾಡಿದರು.

ಕಾರ್ಯಕ್ರಮದಲ್ಲಿ ಮುದಿಗೌಡ ಮಾಲಿ ಪಾಟೀಲ್, ಆದಿತ್ಯಗೌಡ ಪೋಲಿಸ್ ಪಾಟೀಲ್,ಮಹಿಪಾಲರಡ್ಡಿ ಡಿಗ್ಗಾವಿ, ಶಾಂತಗೌಡ ಚೌಧರಿ ರವಿ ಸೊನ್ನದ್, ಸುಜಾತಾ ಮಠ, ಅನ್ನಪೂರ್ಣ, ಶರಣಬಸವ ಮಾಡೋಳೆ, ವಿರುಪಣ್ಣಗೌಡ ಹಲವರು ಉಪಸ್ಥಿತರಿದ್ದರು. ವಿವಿಧ ಸಂಘಗಳ ಅಧ್ಯಕ್ಷರು, ಉಪಾಧ್ಯಕ್ಷರು, ಸದಸ್ಯರು, ಕಾರ್ಯನಿರ್ವಹಣಾಧಿಕಾ–ರಿಗಳು ಭಾಗವಹಿಸಿದ್ದರು.

### ರೈತರ ಜೋಡೆತ್ತುಗಳ ನಿರ್ವಹಣೆಗೆ ಮಾಸಿಕ 11 ಸಾವಿರ ನೀಡುವಂತೆ ಆಗ್ರಹಿಸಿ ತಹಸೀಲ್ದಾರ್‌ಗೆ ಮನವಿ

# ಹೆದ್ದಾರಿ ತಡೆದು ನಂದಿ ಸೇನೆಯಿಂದ ಬೃಹತ್ ಪ್ರತಿಭಟನೆ

■ ಉದಯರಶ್ಮಿ ದಿನಪತ್ರಿಕೆ



ತಿಕೋಟಾ: ರೈತರ ಕೃಷಿ ಚಟುವಟಿಕೆಗಳಲ್ಲಿ ಪ್ರಮುಖ ಪಾತ್ರ ವಹಿಸುವ ಜೋಡೆತ್ತುಗಳ ನಿರ್ವಹಣೆಗೆ ಮಾಸಿಕ 11 ಸಾವಿರ ಆರ್ಥಿಕ ನೆರವು ನೀಡಬೇಕು ಎಂದು ಆಗ್ರಹಿಸಿ, ತಿಕೋಟಾ ಪಟ್ಟಣ ಹಾಗೂ ಹೊನವಾಡ ಗ್ರಾಮದಲ್ಲಿ ನಂದಿ ಸೇನೆಯ ವತಿಯಿಂದ ಪ್ರತಿಭಟನೆ ನಡೆಸಲಾಯಿತು.

ಗ್ರಾಮದ ಹೆದ್ದಾರಿಯ ಮೇಲೆ ಎತ್ತುಗಳನ್ನು ನಿಲ್ಲಿಸುವ ಮೂಲಕ ರಸ್ತೆ ತಡೆದು ಪ್ರತಿಭಟನಾಕಾರರು ತಮ್ಮ ಬೇಡಿಕೆಯನ್ನು ಸರ್ಕಾರದ ಗಮನಕ್ಕೆ ತಂದರು. ಜೋಡೆತ್ತುಗಳು ರೈತರ ಬದುಕಿನ ಅವಿಭಾಜ್ಯ ಅಂಗವಾಗಿದ್ದು, ಕೃಷಿ ಕಾರ್ಯಗಳಲ್ಲಿ ಅವುಗಳ ಕೊಡುಗೆ ಅಪಾರವಾಗಿದೆ. ಆದರೆ, ಬರಗಾಲದ ಇಂದಿನ ದಿನಗಳಲ್ಲಿ ಮೇವು, ಪಶು ಆಹಾರ ಹಾಗೂ ನಿರ್ವಹಣಾ ವೆಚ್ಚಗಳು ಹೆಚ್ಚಾಗುತ್ತಿರುವುದರಿಂದ ರೈತರು ಆರ್ಥಿಕ ಸಂಕಷ್ಟ ಎದು–ರಿಸುತ್ತಿದ್ದಾರೆ. ಹೀಗಾಗಿ, ಜೋಡೆತ್ತುಗಳನ್ನು ಸಾಕುವ ರೈತರಿಗೆ ಪ್ರತಿ ತಿಂಗಳು 11 ಸಾವಿರ ಸಹಾಯಧನ ನೀಡುವ ಮೂಲಕ ಸರ್ಕಾರ ನೆರವಿಗೆ ಬರಬೇಕು ಎಂದು ಪ್ರತಿಭಟನಾಕಾರರು ಒತ್ತಾಯಿಸಿದರು.

ಕೃಷಿಯಲ್ಲಿ ಯಾಂತ್ರೀಕರಣ ಹೆಚ್ಚಾಗುತ್ತಿರುವ ಇಂದಿನ ಸಂದರ್ಭದಲ್ಲಿ ಸಾಂಪ್ರದಾಯಿಕ ಕೃಷಿ ಪದ್ಧತಿಯನ್ನು ಉಳಿಸುವುದು ಹಾಗೂ ಜೋಡೆತ್ತುಗಳನ್ನು ಸಾಕುವ ರೈತರ ಹಿತ ಕಾಪಾಡುವುದು ಅಗತ್ಯವಾಗಿದೆ. ಸರ್ಕಾರ ಈ ಬೇಡಿಕೆಯನ್ನು ಗಂಭೀರವಾಗಿ ಪರಿಗಣಿಸಿ ಸೂಕ್ತ ಕ್ರಮ ಕೈಗೊಳ್ಳಬೇಕು ಎಂದು ಆಗ್ರಹಿಸಲಾಯಿತು.

ಪ್ರತಿಭಟನೆಯ ಬಳಿಕ ತಮ್ಮ ಬೇಡಿಕೆಗಳನ್ನು ಒಳಗೊಂಡ ಮನವಿಯನ್ನು ತಹಸೀಲ್ದಾರ ಸುರೇಶ ಚವಲರ ಅವರಿಗೆ ಸಲ್ಲಿಸಲಾಯಿತು.

ರೈತರ ಬದುಕಿಗೆ ಆಸರೆಯಾಗಿರುವ ಜೋಡೆತ್ತುಗಳ ಸಂರಕ್ಷಣೆಗೆ ಸರ್ಕಾರ ವಿಶೇಷ ಯೋಜನೆ ರೂಪಿಸಿ, ಆರ್ಥಿಕ ನೆರವು ಒದಗಿಸಬೇಕು ಎಂಬುದು ನಂದಿ ಸೇನೆಯ ಪ್ರಮುಖ ಒತ್ತಾಯವಾಗಿದೆ.

ರಾಷ್ಟ್ರೀಯ ಹೆದ್ದಾರಿ ಮೇಲೆ ರೈತರು ಪ್ರತಿಭಟನೆ ಹಮ್ಮಿಕೊಂಡಿದ್ದರಿಂದ ಕೆಲ ಗಂಟೆಗಳ ಕಾಲ ವಾಹನ ಸಂಚಾರಕ್ಕೆ ಅಡಚಣೆ ಉಂಟಾಗಿ ಪ್ರಯಾಣಿಕರು ಪರದಾಡುವ ಸ್ಥಿತಿ ನಿರ್ಮಾಣವಾಯಿತು.

ಈ ಸಂದರ್ಭದಲ್ಲಿ ರಾಜಕುಮಾರ ಚಾವರ, ಸುನೀಲ ಗೂಗವಾಡ, ಧರೆಪ್ಪ ಗುಗ್ಗರಿ, ನಜೀರ ನಂದರಗಿ, ಹೆಚ್ ಡಿ ಧರೆಪ್ಪ, ಹಣಮಂತ ಬ್ಯಾಡಗಿ, ಶಿವಯ್ಯ ಸತ್ತಿಗೇರಿ, ಮಾಳಪ್ಪ ಧನಗೊಂಡ, ಧರೆಪ್ಪ ಗೌರಗೊಂಡ, ಶಾಸಪ್ಪ ಬಲೋಳಗಿ, ರೈತ ಮುಖಂಡರು ರೈತರು ಈ ಸಂದರ್ಭದಲ್ಲಿ ಇದ್ದರು.

# ಜಿ.ಪಂ–ತಾ.ಪಂ ಚುನಾವಣೆ: ಅಲ್ಪಸಂಖ್ಯಾತರಿಗೆ ಪ್ರಾತಿನಿಧ್ಯ ಕಲ್ಪಿಸಿ

■ ಉದಯರಶ್ಮಿ ದಿನಪತ್ರಿಕೆ



ವಿಜಯಪುರ: ಜಿಲ್ಲಾ ಪಂಚಾಯತ ಹಾಗೂ ತಾಲೂಕಾ ಪಂಚಾಯತ ಚುನಾವಣೆಗಳಲ್ಲಿ ಅಲ್ಪಸಂಖ್ಯಾತ ಸಮುದಾಯಕ್ಕೆ ಹೆಚ್ಚಿನ ಪ್ರಾತಿನಿಧ್ಯ ನೀಡಬೇಕು ಎಂದು ಕಾಂಗ್ರೆಸ್ ಮುಖಂಡ ಎಸ್.ಎಂ. ಪಾಟೀಲ ಗಣಿಹಾರ ಒತ್ತಾಯಿಸಿದರು.

ಶನಿವಾರಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಪ್ರತಿ ವಿಧಾನಸಭಾ ಕ್ಷೇತ್ರದಲ್ಲಿ ಒಂದು ಜಿಲ್ಲಾ ಪಂಚಾಯತ, ತಾಲೂಕಾ ಪಂಚಾಯತಗೆ ಅಲ್ಪಸಂಖ್ಯಾತ ಸಮುದಾಯಕ್ಕೆ ಟಿಕೇಟ್ ನೀಡಬೇಕು, ಗ್ರಾಮೀಣ ಭಾಗದಲ್ಲಿ ಅಲ್ಪಸಂಖ್ಯಾತ ನೆಲೆಯೂ–ರಿದೆ, ಕಾಂಗ್ರೆಸ್ ಪಕ್ಷ ಪುರಸಭೆ, ನಗರಸಭೆಗಳಿಗೆ ಅಲ್ಪಸಂಖ್ಯಾತ–ರಿಗೆ ಆದ್ಯತೆ ನೀಡಿ ಗ್ರಾಮೀಣ ಭಾಗದಲ್ಲಿ ಯೂ ಈ ಆದ್ಯತೆ ನೀಡಬೇಕಿದೆ ಎಂದರು

ಕಳೆದ 40 ವರುಷಗಳ ಇತಿಹಾಸದಲ್ಲಿ ಕೇವಲ ನಾಲ್ಕು ಜನ ಮಾತ್ರ ಜಿಲ್ಲಾ ಪಂಚಾಯತ ಸದಸ್ಯರಾಗಿ ಆಯ್ಕೆಯಾಗಿದ್ದಾರೆ, ಅದರಲ್ಲಿ ಮೂವರು ಆಯ್ಕೆಯಾಗಿದ್ದು ಜನತಾ ದಳದಿಂದ, ಓರ್ವ ಸದಸ್ಯರು ಮಾತ್ರ ಕಾಂಗ್ರೆಸ್ ಪಕ್ಷದಿಂದ ಆಯ್ಕೆಯಾಗಿದ್ದಾರೆ, ಜಿಲ್ಲಾ ಪಂಚಾಯತ ಅಲ್ಪಸಂಖ್ಯಾತ–ರಿಗೆ ಪ್ರಾತಿನಿಧ್ಯ ನೀಡಬೇಕು ಎಂದರು.

ಮುಸ್ಲಿಂರಿಗೆ ಟಿಕೇಟ್ ನೀಡಿದರೆ ಉಳಿದ ಸಮುದಾಯದವರು ಮತ ಹಾಕಲ್ಲ ಎನ್ನುವುದು ಕೆಲವು ಕಾಂಗ್ರೆಸ್ ನಾಯಕರ ಮನಸ್ಸಿನಲ್ಲಿ ಬೇರೂರಿದೆ, ನೀವು ಮನವೊಲಿಸಿ ವೋಟು ಹಾಕಿಸಬೇಕಲ್ಲವೇ? ಈಗ

ರಾಜಕೀಯ ಕಾಲಘಟ್ಟ ಬದಲಾಗಿದೆ, ಅಧಿಕಾರ ಹಾಗೂ ಅವಕಾಶ ದೊರಕದೇ ಹೋದರೆ ಪರ್ಯಾಯ ಪಕ್ಷಗಳತ್ತ ಯುವಜನತೆ ಮುಖ ಮಾಡುತ್ತಿದ್ದಾರೆ, ಇದಕ್ಕೆ ಅವಕಾಶ ಕೊಡಬೇಡಿ ಎಂದರು.

ಮುಸ್ಲಿಂರು ಕಾಂಗ್ರೆಸ್ ಪಕ್ಷವನ್ನು ಅವಕಾಶವಾದಿತನಕ್ಕೆ ಬೆಂಬಲಿಸುತ್ತಿಲ್ಲ, ಸಂವಿಧಾನ ರಕ್ಷಣೆ, ಏಕತೆ ರಕ್ಷಣೆಗಾಗಿ ಕಾಂಗ್ರೆಸ್ ಮುಸ್ಲಿಂರು ಬೆನ್ನೆಲುಬಾಗಿ ನಿಂತಿದ್ದಾರೆ ಎಂದರು.


ಕರ್ನಾಟಕ ಸರ್ಕಾರ

**ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿಗಳ ಕಚೇರಿ, ಸಾಮಾಜಿಕ ಅರಣ್ಯ ಉಪ–ವಿಭಾಗ, ವಿಜಯಪುರ**

ಸಂಖ್ಯೆ: ವಿಜೆಪಿ/ಸಾಅವಿ/ಇ–ಪ್ರೊಕ್ಯೂರ್‌ಮೆಂಟ್/ಕ.ಟೆಂ/2026–27

ದಿನಾಂಕ: 16.10.2026

**ಸಂಕ್ಷಿಪ್ತ ಟೆಂಡರ್ ಪ್ರಕಟಣೆ**

ವಿಜಯಪುರ ಸಾಮಾಜಿಕ ಅರಣ್ಯ ಉಪ–ವಿಭಾಗದ ಅಧೀನ ಸಾಮಾಜಿಕ ಅರಣ್ಯ ವಿಜಯಪುರ ವಲಯದಲ್ಲಿ 2026–27 ನೇ ಸಾಲಿಗೆ ಕೈಗೊಳ್ಳುವ ಡೋಣಿ ನದಿ ದಂಡೆಗಳ ಬದುಗಳಲ್ಲಿ ಮುಂಗಡ ಕಾಮಗಾರಿ ಕೈಗೊಳ್ಳಲು ಅನುದಾನದ ನಿರೀಕ್ಷೆಯ ಮೇರೆಗೆ ದಿನಾಂಕ: 17.10.2026 ರಿಂದ 27.10.2026 ರವರೆಗೆ ಅರ್ಹ ನೋಂದಾಯಿತ ಅರಣ್ಯ ಗುತ್ತಿಗೆದಾರರಿಂದ ಕರ್ನಾಟಕ ಸಾರ್ವಜನಿಕ ಸಂಗ್ರಹಣಾ ಪೋರ್ಟಲ್ ಮೂಲಕ ಅರಣ್ಯೀಕರಣ ಕಾಮಗಾರಿಗಳಿಗೆ ಟೆಂಡರ್‌ನ್ನು ಕರೆಯಲಾಗಿದೆ ಹಾಗೂ ಸದರಿ ಟೆಂಡರ್‌ಗಳಿಗೆ ಯಾರಿಂದಲೂ ಬಿಡ್‌ಗಳು ಸಲ್ಲಿಕೆಯಾಗದಿದ್ದಲ್ಲಿ 3 ದಿನಗಳವರೆಗೆ ಅವಧಿ ವಿಸ್ತರಿಸಲಾಗಿದೆ. **(ಟೆಕ್ನಿಕಲ್ ಮತ್ತು ಫೈನಾನ್ಸಿಯಲ್ ಬಿಡ್ ತೆರೆಯುವ ದಿನಾಂಕ: 29.10.2026 ರಂದು ಬೆಳಿಗ್ಗೆ 11.00 ಘಂಟೆಗೆ)** ಭಾಗವಹಿಸಲಿಚ್ಛಿಸುವವರು ತಮಗೆ ಅನುಕೂಲವಾಗುವ ಟೆಂಡರ್ ವಿವರಗಳನ್ನು www.kppp.karnataka.gov.in ಮೂಲಕ ಟೆಂಡರ್ ಮಾಹಿತಿಯನ್ನು ಪಡೆದುಕೊಳ್ಳಬಹುದು.

**ಸಹಿ/– ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ, ಸಾಮಾಜಿಕ ಅರಣ್ಯ ಉಪ ವಿಭಾಗ, ವಿಜಯಪುರ**

ವಾಸಾಸಂಇ/ವಿಜಯಪುರ/363/ಕೆಎಸ್‌ಎಂಸಿಎ/2026–27


# ಬೆಳೆಹಾನಿ ರೈತರಿಗೆ ಎಕರೆಗೆ ರೂ. 25,000 ಪರಿಹಾರ ನೀಡಲು ಆಗ್ರಹ

■ ಉದಯರಶ್ಮಿ ದಿನಪತ್ರಿಕೆ



ವಿಜಯಪುರ: ಜಿಲ್ಲೆ ಸೇರಿದಂತೆ ರಾಜ್ಯದ ವಿವಿಧ ಬರಪೀಡಿತ ಪ್ರದೇಶಗಳಲ್ಲಿ ಮಳೆಯ ಕೊರತೆಯಿಂದ ಬೆಳೆ ನಷ್ಟ ಅನುಭವಿಸಿರುವ ರೈತರಿಗೆ ಪ್ರತಿ ಎಕರೆಗೆ ರೂ. 25,000 ಪರಿಹಾರ ನೀಡಬೇಕು ಎಂದು ಭೀಮ್ ರಾಜ್ಯ ದಲಿತ ಸೇವಾ ಸಮಿತಿ (ರಿ.), ಬೆಂಗಳೂರು ಸಂಘಟನೆಯ ರಾಜ್ಯ ಮಹಿಳಾ ಘಟಕದ ಅಧ್ಯಕ್ಷರಾದ ಶ್ರೀಮತಿ ನೀಲಾಂಬಿಕಾ ಕಟ್ಟಿಮನಿ ಹಾಗೂ ರಾಜ್ಯ ಅಲ್ಪಸಂಖ್ಯಾತರ ಮಹಿಳಾ ಘಟಕದ ಅಧ್ಯಕ್ಷರಾದ ಶ್ರೀಮತಿ ಸಲ್ಮಾ ಮೈರಾಗೋಳ ಅವರ ನೇತೃತ್ವದಲ್ಲಿ ರಾಜ್ಯ ಸರ್ಕಾರವನ್ನು ಆಗ್ರಹಿಸಿ ಶನಿವಾರ ಜಿಲ್ಲಾಧಿಕಾರಿಗಳ ಮೂಲಕ ಮನವಿ ಸಲ್ಲಿಸಿದರು.

ಈಗಾಗಲೇ ಸರ್ಕಾರದಿಂದ ಪರಿಹಾರ ಘೋಷಣೆಯಾಗಿದ್ದರೂ, ರೈತರು ಅನುಭವಿಸಿರುವ ನಷ್ಟಕ್ಕೆ ಹೋಲಿಸಿದರೆ ಹೆಚ್ಚಿನ ಆರ್ಥಿಕ ನೆರವಿನ ಅಗತ್ಯವಿದೆ. ಆದ–'ರಿಂದ, ಸರ್ಕಾರವು ರೈತರ ಸಂಕಷ್ಟವನ್ನು ಗಂಭೀರವಾಗಿ ಪರಿಗಣಿಸಿ, ಅರ್ಹ ರೈತ–ರಿಗೆ ಪ್ರತಿ ಎಕರೆಗೆ ಕನಿಷ್ಠ ರೂ. 25,000 ಪರಿಹಾರ ನೀಡಬೇಕು ಎಂದು ಇಬ್ಬರೂ ಮಹಿಳಾ ಘಟಕದ ಅಧ್ಯಕ್ಷರು ಆಗ್ರಹಿಸಿದ್ದಾರೆ.

ರೈತರ ನ್ಯಾಯಸಮ್ಮತ ಬೇಡಿಕೆಗಳನ್ನು ಈಡೇರಿಸಬೇಕು. ಸರ್ಕಾರವು ರೈತರ ಸಂಕಷ್ಟಕ್ಕೆ ತಕ್ಷಣ ಸ್ಪಂದಿಸಿ, ಪ್ರತಿ ಎಕರೆಗೆ ರೂ. 25,000 ಪರಿಹಾರ ನೀಡುವ ಕುರಿತು ಶೀಘ್ರ ನಿರ್ಧಾರ ಕೈಗೊಳ್ಳಬೇಕು. ಇಲ್ಲದಿದ್ದರೆ, ರೈತರ ಹಕ್ಕುಗಳಿಗಾಗಿ ಪ್ರಜಾಸತ್ತಾತ್ಮಕ ರೀತಿಯಲ್ಲಿ ಹೋರಾಟವನ್ನು ಮುಂದುವ–ರಿಸಲಾಗುವುದು ಎಂದು ಸಂಘಟನೆಯ ವತಿಯಿಂದ ತಿಳಿಸಲಾಗಿದೆ.

ಈ ವೇಳೆ ಸಂಘಟನೆಯ ರಾಜ್ಯ ಅಧ್ಯಕ್ಷ ಅಪ್ಪುರಾಜ್ ನಿಮಾದಾರ, ರಾಜ್ಯ ಉಪಾಧ್ಯಕ್ಷರಾದ ವಿಜಯಕುಮಾರ ನಿಮಾದಾರ, ಮಲ್ಲಿಕಾರ್ಜುನ ಬೂತನಾಳ ಸೇರಿದಂತೆ ಹಲವರಿದ್ದರು.

# ಗ್ರಾಮೀಣ ಬಡ ಮಕ್ಕಳಿಗೆ ಗುಣಮಟ್ಟದ ಶಿಕ್ಷಣ ಸಿಗಲಿ

■ ಉದಯರಶ್ಮಿ ದಿನಪತ್ರಿಕೆ



ಅಥಣಿ: ಗ್ರಾಮೀಣ ಪ್ರದೇಶದ ಬಡ ಮಕ್ಕಳಿಗೆ ಗುಣಮಟ್ಟದ ಶಿಕ್ಷಣ ದೊರೆಯಬೇಕು. ಯಾವುದೇ ಮಗು ಶಿಕ್ಷಣದಿಂದ ವಂಚಿತವಾಗಬಾರದು ಎಂಬ ಉದ್ದೇಶದಿಂದ ಸರಕಾರಿ ಶಾಲೆಗಳ ಅಭಿವೃದ್ಧಿಗೆ ಜನಪ್ರತಿನಿಧಿಗಳು, ರಾಜ–ಕಾರಣಿಗಳು ಹಾಗೂ ಸಮಾಜದ ಗಣ್ಯರು ಕೈಜೋಡಿಸಬೇಕು ಎಂದು ಶಿಕ್ಷಣ ಸಚಿವ ಮಧು ಬಂಗಾರಪ್ಪ ಹೇಳಿದರು.

ಅಥಣಿ ತಾಲೂಕಿನ ನಾಗನೂರ ಪಿ.ಕೆ. ಗ್ರಾಮದ ಉನ್ನತೀಕರಿಸಿದ ಸರಕಾರಿ ಕನ್ನಡ ಹಿರಿಯ ಹಾಗೂ ಪ್ರೌಢಶಾಲೆಯ ಶತಮಾನೋತ್ಸವ ಸಂಭ್ರಮಕ್ಕೆ ಶುಕ್ರವಾರ ಚಾಲನೆ ನೀಡಿ ಮಾತನಾಡಿದ ಅವರು, ಮಕ್ಕಳಿಗೆ ಗುಣಮಟ್ಟದ ಶಿಕ್ಷಣ ಒದಗಿಸುವುದು ಸರಕಾರದ ಪ್ರಮುಖ ಆದ್ಯತೆಯಾಗಿದೆ. ರಾಜ್ಯದಲ್ಲಿ ಸುಮಾರು 46 ಸಾವಿರ ಸರಕಾರಿ ಶಾಲೆಗಳಿದ್ದು, 58 ಲಕ್ಷ ಮಕ್ಕಳು ಶಿಕ್ಷಣ ಪಡೆಯುತ್ತಿದ್ದಾರೆ. ಶಿಕ್ಷಣ ಇಲಾಖೆಯಲ್ಲಿ ಸರಕಾರ 44 ಸಾವಿರ ಕೋಟಿ ವೆಚ್ಚ ಮಾಡುತ್ತಿದೆ ಎಂದರು.

ಅಲ್ಲದೆ, 1500 ಶಾಲೆಗಳ ಅಭಿವೃದ್ಧಿಗೆ 4200 ಕೋಟಿ ಅನುದಾನ ಮಂಜೂರು ಮಾಡಲಾಗಿದೆ. ಸರಕಾರಿ ಶಾಲೆಗಳ ಅಭಿವೃದ್ಧಿ ಪ್ರತಿಯೊಬ್ಬರ ಜವಾಬ್ದಾ–ರಿಯಾಗಿದೆ.

ಈ ನಿಟ್ಟಿನಲ್ಲಿ ಸರಕಾರ ಜಾ–ರಿಗೆ ತಂದಿರುವ "ನಮ್ಮ ಶಾಲೆ, ನಮ್ಮ ಜವಾಬ್ದಾರಿ" ಯೋಜನೆಯಡಿ ರಾಜ–ಕಾರಣಿಗಳು ಹಾಗೂ ಸಾರ್ವಜನಿಕರು ಶಾಲೆಗಳ ಅಭಿವೃದ್ಧಿಗೆ ನೆರವಾಗಬೇಕು. ನಾನು ಕೂಡ ತಮ್ಮ ತಂದೆ ನೀಡಿದ ಶಾಲೆಯ ಅಭಿವೃದ್ಧಿಗಾಗಿ 10 ಲಕ್ಷ ದೇಣಿಗೆ ನೀಡಿದ್ದೇನೆ ಎಂದು ಹೇಳಿದರು.

ಈ ವೇಳೆ ವಿಧಾನ ಪರಿಷತ್ ಸದಸ್ಯ ಹಣಮಂತ ನಿರಾಣಿ, ಎಸ್.ಡಿ.ಎಂ.ಸಿ ಅಧ್ಯಕ್ಷ ಕಾಶಿನಾಥ ಸವದಿ, ಮುಖಂಡರಾದ ಚಿದಾನಂದ ಸವದಿ, ಶಿವಕುಮಾರ ಸವದಿ, ಸಂತೋಷ ಸಾವಡಕರ, ಶಿಕ್ಷಣ ಇಲಾಖೆ ಅಪರ ಆಯುಕ್ತ ಈಶ್ವರ ಉಳ್ಳಾಗಡ್ಡಿ, ಉಪವಿಭಾಗಾಧಿಕಾರಿ ಸುಭಾಷ ಸಂಪಗಾಂವಿ, ಡಿಡಿಪಿಐ ಅಜೀತ ಮನ್ನಿಕೇರಿ, ತಹಸೀಲ್ದಾರ ಸಿದರಾಯ ಭೋಸಗಿ, ಇ ಓ ಶಿವಾನಂದ ಕಲಾರಪೂರ, ಬಿಇಒ ಎಂ ಆರ್ ಮುಂಜಿ, ಡಿವೈಎಸ್‌ಪಿ ವೀರೇಂದ್ರ ಪಿ. ಸೇರಿದಂತೆ ಶಾಲೆಯ ಶಿಕ್ಷಕ ವೃಂದ, ವಿದ್ಯಾರ್ಥಿಗಳು ಹಾಗೂ ನಾಗನೂರ ಗ್ರಾಮಸ್ಥರು ಉಪಸ್ಥಿತರಿದ್ದರು.

### ಶಿಕ್ಷಣವೇ ಮನುಷ್ಯನನ್ನು ಶ್ರೇಷ್ಠನಾಗಿಸುತ್ತದೆ: ಅಭಿನವ ಗವಿಸಿದ್ದೇಶ್ವರ ಸ್ವಾಮೀಜಿ

ಕೊಪ್ಪಳ ಗವಿಮಠದ ಅಭಿನವ ಗವಿಸಿದ್ದೇಶ್ವರ ಸ್ವಾಮೀಜಿ ಆಶೀರ್ವಚನ ನೀಡಿ, ಮನುಷ್ಯನನ್ನು ಶ್ರೇಷ್ಠನನ್ನಾಗಿ ಮಾಡುವ ಶಕ್ತಿ ಶಿಕ್ಷಣಕ್ಕಿದೆ. ಜೀವ ವಿಕಾಸದಲ್ಲಿ ಮನುಷ್ಯನಿಗೆ ಇತರ ಜೀವಿಗಳಂತೆ ಅಪಾರ ದೈಹಿಕ ಶಕ್ತಿ, ವೇಗ ಅಥವಾ ಆಕರ್ಷಕ ಬಣ್ಣಗಳಿಲ್ಲ. ಆದರೆ ಬುದ್ಧಿವಂತಿಕೆ ಮತ್ತು ಆ ಬುದ್ಧಿಗೆ ಬೆಳಕು ನೀಡುವ ಶಿಕ್ಷಣದ ಮೂಲಕ ಮನುಷ್ಯ ಇತರ ಜೀವಿಗಳಿಗಿಂತ ವಿಶಿಷ್ಟನಾಗಿದ್ದಾನೆ. ಜೀವನದಲ್ಲಿ ಸಂಕಷ್ಟಗಳು ಎದುರಾದಾಗ, ನಮ್ಮವರು ದೂರವಾದಾಗ ಹಾಗೂ ಕತ್ತಲೆಯ ಹಾದಿಯಲ್ಲಿ ಸಾಗಬೇಕಾದಾಗ ಮನುಷ್ಯನೊಳಗಿನ ಜ್ಞಾನವೇ ದಾರಿದೀಪವಾಗುತ್ತದೆ. ಆದ್ದರಿಂದ ಶಿಕ್ಷಣವೆಂಬುದು ಕೇವಲ ನಾಲ್ಕು ಗೋಡೆಗಳ ನಡುವೆ ಕಲಿಯುವ ಪಾಠವಲ್ಲ, ಅದು ಬದುಕನ್ನು ಅರ್ಥಮಾಡಿಕೊಳ್ಳುವ, ಸವಾಲುಗಳನ್ನು ಎದುರಿಸುವ ಮತ್ತು ಸಮಾಜಕ್ಕೆ ಕೊಡುಗೆ ನೀಡುವ ಶಕ್ತಿಯಾಗಿದೆ ಎಂದರು.

**Printed by:** AVINASH BIDARI, **Published and owned by:** SHAILA INDUSHEKHAR MANUR **Printed at:** ARUN OFFSET PRINTERS,No.23, Sanjaygandhi Nagar, Indi Road, Vijayapura - 586101, Vijayapura Dist., Karnataka. **Published at:** At No.14, Silk City, Near Varasiddi Vinayaka Temple, Atalatti Link Road, Vijayapura -586102, Vijayapura Dist., Karnataka..**Editor :** INDUSHEKHAR MANUR